# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಭಾನುವಾರ, ಏಪ್ರಿಲ್ 18, 2021

ಸಂಪುಟ : 47 ಸಂಚಿಕೆ : 348 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಜಾತ್ರೆಗಳು ನಿಷೇಧ ಮದುವೆಗೂ ಪಾಸ್

**ಸರ್ಕಾರದಿಂದ ಕಠಿಣ ಕೊರೊನಾ ಮಾರ್ಗಸೂಚಿ**

ಬೆಂಗಳೂರು, ಏ. 17 - ರಾಜ್ಯಾದ್ಯಂತ ಕೊರೊನಾ ಸೋಂಕು ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜಾತ್ರೆಗಳನ್ನು ನಿಷೇಧಿಸಿರುವ ರಾಜ್ಯ ಸರ್ಕಾರ, ಇನ್ನು ಮುಂದೆ ಮದುವೆ ಮತ್ತು ಇನ್ನಿತರೆ ಸಮಾರಂಭಗಳನ್ನು ಮಾಡಬೇಕಾದರೆ ಸ್ಥಳೀಯ ತಹಶೀಲ್ದಾರ್ ಹಾಗೂ ಪೊಲೀಸರ ಅನುಮತಿ ಪಡೆದುಕೊಳ್ಳಬೇಕು ಎಂದು ತಿಳಿಸಿದೆ.

ಕಂದಾಯ ಸಚಿವ ಆರ್. ಅಶೋಕ್, ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಆರೋಗ್ಯ ಸಚಿವ ಡಾ. ಸುಧಾಕರ್ ಇಂದು ಜಿಲ್ಲಾಡಳಿತದೊಟ್ಟಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿದ ನಂತರ ಸರ್ಕಾರ ಈ ತೀರ್ಮಾನ ಕೈಗೊಂಡಿದೆ.

ಮೇ ತಿಂಗಳಲ್ಲಿ ಮದುವೆ ನಡೆಸುವುದಾದರೆ ಮುಂದೂಡಬೇಕು. ಸಾಧ್ಯವಾಗದಿದ್ದರೆ, ಸರ್ಕಾರದಿಂದ 50 ಪಾಸ್‌ಗಳನ್ನು ಪಡೆದು, ನಿಮ್ಮ ಶುಭ ಸಮಾರಂಭ ಮುಗಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ. ಒಂದು ವೇಳೆ ನಿಗದಿತ ಸಂಖ್ಯೆ ಗಿಂತ ಹೆಚ್ಚು ಮಂದಿ ಸಮಾರಂಭದಲ್ಲಿ ಪಾಲ್ಗೊಂಡರೆ ಅಂತಹ ಮದುವೆ ಕಲ್ಯಾಣ ಮಂಟಪಗಳನ್ನು ಮುಚ್ಚಿಸಲಾಗುವುದು.

ಈಗಾಗಲೇ ಮದುವೆಗಳು ದಿನಾಂಕ ನಿಗದಿಯಾಗಿ ಹೋಗಿದ್ದರೆ, ಅಂತಹವರು ಕೇಂದ್ರ ನಿಯಮಾವಳಿಯಂತೆ 100 ಮತ್ತು 200 ಮಂದಿ ಸೇರಿಸಿ, ಕಾರ್ಯ ಮುಗಿಸಿಕೊಳ್ಳಬೇಕು.

ಜಾತ್ರೆಗಳು ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಸ್ಥಳೀಯರ ಮನವೊಲಿಸಿ, ಇಂತಹ ಸಮಾರಂಭಗಳು ನಡೆಯದಂತೆ ನೋಡಿಕೊಳ್ಳುವ ಹೊಣೆ ಜಿಲ್ಲಾಡಳಿತಕ್ಕೆ ಸೇರಿದ್ದು, ಒಂದು ವೇಳೆ ಇಂತಹ (2ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಮತ್ತೆ ಕೋವಿಡ್ ಕೇರ್ ಸೆಂಟರ್ ತೆರೆಯಲು ಚಿಂತನೆ

**ವೆಂಟಿಲೇಟರ್, ಆಕ್ಸಿಜನ್ ವ್ಯವಸ್ಥೆ, ಉಪಕರಣ ಸುಸ್ಥಿತಿಯಲ್ಲಿಡಲು ಜಿಲ್ಲಾಧಿಕಾರಿ ಬೀಳಗಿ ಸೂಚನೆ**

ದಾವಣಗೆರೆ ಏ.17- ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಕೋವಿಡ್ ಕೇರ್ ಸೆಂಟರ್‌ಗಳನ್ನು ಪುನರಾರಂಭಿಸಲು ಗಂಭೀರ ಚಿಂತನೆ ನಡೆಸಲಾಗಿದೆ ಎಂದಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ವೆಂಟಿಲೇಟರ್, ಆಕ್ಸಿಜನ್ ಪೂರೈಕೆ ವ್ಯವಸ್ಥೆ ಮತ್ತು ಉಪಕರಣಗಳನ್ನು ಸುಸ್ಥಿತಿಯಲ್ಲಿಡುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಕೊರೊನಾ ನಿಯಂತ್ರಣ ಕುರಿತ ತುರ್ತು ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 513 ಸಕ್ರಿಯ ಪ್ರಕರಣಗಳಿದ್ದು, ಪರಿಸ್ಥಿತಿ ಗಂಭೀರತೆ ಪಡೆದುಕೊಳ್ಳುತ್ತಿದೆ ಎಂದಿದ್ದಾರೆ.

ಕಳೆದ ವರ್ಷ ಜಿಲ್ಲೆಯ ಹಾಸ್ಟೆಲ್‌ಗಳಲ್ಲಿ ಕೋವಿಡ್ ಹೆಲ್ತ್ ಕೇರ್ ಸೆಂಟರ್ ಗಳನ್ನು ತೆರೆದು, ಸೋಂಕಿತರಿಗೆ ವೈದ್ಯಕೀಯ ನೆರವು ನೀಡಿದ ಅನುಭವ ಇದೆ. ಮುಂದಿನ 15 ದಿನಗಳಲ್ಲಿ ಕೋವಿಡ್ ಹೆಲ್ತ್ ಕೇರ್ ಸೆಂಟರ್‌ಗಳನ್ನು ಹಾಸ್ಟೆಲ್‌ಗಳಲ್ಲಿ ಪ್ರಾರಂಭಿಸುವ ಅಗತ್ಯ ಬರಬಹುದು. ಇದಕ್ಕೆ ಸಿದ್ಧತೆಗಳನ್ನು (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 122 ಪಾಸಿಟಿವ್

ದಾವಣಗೆರೆ, ಏ.17- ಜಿಲ್ಲೆಯಲ್ಲಿ ಶನಿವಾರ 122 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ 503ಕ್ಕೆ ಏರಿಕೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 92, ಹರಿಹರ 6, ಜಗಳೂರು 4, ಚನ್ನಗಿರಿ 9, ಹೊನ್ನಾಳಿ ತಾಲ್ಲೂಕಿನಲ್ಲಿ 5 ಹಾಗೂ ಹೊರ ಜಿಲ್ಲೆಯ 6 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಇಂದು 33 ಜನರು ಸೋಂಕು ಮುಕ್ತರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

## ರೈಲ್ವೆ ನಿಲ್ದಾಣ ಹಾಗೂ ರೈಲುಗಳಲ್ಲಿ ಮಾಸ್ಕ್ ಧರಿಸದಿದ್ದರೆ 500 ರೂ. ದಂಡ

ನವದೆಹಲಿ, ಏ. 17 – ರೈಲ್ವೆ ನಿಲ್ದಾಣ ಹಾಗೂ ರೈಲು ಗಳಲ್ಲಿ ಮಾಸ್ಕ್ ಧರಿಸದೇ ಇದ್ದರೆ 500 ರೂ.ಗಳವರೆಗೆ ದಂಡ ತೆರಬೇಕಾಗುತ್ತದೆ. ಮಾಸ್ಕ್ ಧರಿಸದೇ ಇರುವುದಕ್ಕೆ ರೈಲ್ವೆ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿ, ಈ ಬಗ್ಗೆ ಶನಿವಾರ ಆದೇಶ ಹೊರಡಿಸಲಾಗಿದೆ.

ಕೊರೊನಾ ಸಂದರ್ಭದಲ್ಲಿ ಜನರು ಮಾಸ್ಕ್ ಧರಿಸುವಂತೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ನೂತನ ನಿಯಮವನ್ನು ತಕ್ಷಣದಿಂದಲೇ ಜಾರಿಗೆ ತರಲಾಗಿದ್ದು, ಇದು ಆರು ತಿಂಗಳವರೆಗೆ ಜಾರಿಯಲ್ಲಿರಲಿದೆ.

## ಆಕ್ಸಿಜನ್ ಸಾಗಿಸಲು ರೈಲ್ವೆ ನೀತಿ

ನವದೆಹಲಿ ಏ. 17 – ಕ್ರಯೋಜನಿಕ್ ಟ್ಯಾಂಕರ್‌ಗಳಲ್ಲಿ ದ್ರವ ಆಕ್ಸಿಜನ್ ಸಾಗಿಸುವ ಕುರಿತು ರೈಲ್ವೆ ನೀತಿಯೊಂದನ್ನು ರೂಪಿಸಿದೆ. ಮಹಾರಾಷ್ಟ್ರ ಸರ್ಕಾರ ಆಕ್ಸಿಜನ್ ಸಾಗಣೆಗೆ ಮನವಿ ಮಾಡಿ ಕೊಂಡ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಶುಕ್ರವಾರ ರಾತ್ರಿ ಈ ನೀತಿಯನ್ನು ಪ್ರಕಟಿಸಲಾಗಿದ್ದು, ಕ್ರಯೋಜನಿಕ್ ಟ್ಯಾಂಕರ್‌ಗಳ ಮೂಲಕ ರಾಜ್ಯಗಳಿಗೆ ಆಕ್ಸಿಜನ್ ಪೂರೈಕೆ ಮಾಡಲಾಗುವುದು.







# ರಸಗೊಬ್ಬರ ದರ ಏರಿಕೆ : ರೈತರಿಂದ ಹೆಚ್ಚಿನ ದರ ವಸೂಲಿ

## ಜಗಳೂರು ತಾ.ಪಂ ಕೆಡಿಪಿ ಸಭೆಯಲ್ಲಿ ವ್ಯಾಪಕ ಚರ್ಚೆ



ಜಗಳೂರು, ಏ.17- ರಸಗೊಬ್ಬರ ದರ ಏರಿಕೆಗೆ ಸಂಬಂಧಿಸಿದಂತೆ ತಾ.ಪಂ ಅಧ್ಯಕ್ಷರಾದ ಮಂಜುಳಾ ಶಿವಾನಂದಪ್ಪ, ಇವರ ಅಧ್ಯಕ್ಷತೆಯಲ್ಲಿ ನಡೆದ ತಾಪಂ, ಕೆಡಿಪಿ ಸಭೆಯಲ್ಲಿ ವ್ಯಾಪಕ ಚರ್ಚೆ ನಡೆಸಲಾಯಿತು.

ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಎನ್.ಸಿದ್ದೇಶ್ ಮಾತನಾಡಿ, ಕೇಂದ್ರ ರಸಗೊಬ್ಬರ ಖಾತೆ ಸಚಿವರು ಯಾವುದೇ ಗೊಬ್ಬರಗಳ ಬೆಲೆ ಏರಿಕೆ ಮಾಡಿಲ್ಲ. ಹೆಚ್ಚಿನ ಬೆಲೆ ನೀಡಬೇಕಾಗಿಲ್ಲ ಎಂದು ಹೇಳಿದ್ದರೂ ಸಹ ಗೊಬ್ಬರದ ಬೆಲೆಯಲ್ಲಿ ಕ್ವಿಂಟಾಲ್‌ವೊಂದಕ್ಕೆ 300-400 ರೂ. ದುಪ್ಪಟ್ಟಾಗಿರುವುದು ರೈತರಿಗೆ ನುಂಗಲಾರದ ತುತ್ತಾಗಿದೆ. ಆದ್ದರಿಂದ ರೈತರು ಹೊಸ ದರ ನೀಡಿ ಖರೀದಿಸಬೇಕೋ ಅಥವಾ ಹಳೆ ದರಕ್ಕೆ ಕೊಂಡುಕೊಳ್ಳಬೇಕೋ ಎಂಬ ಜಿಜ್ಞಾಸೆಯಿಂದ ರೈತರು ಕಂಗಾಲಾಗಿದ್ದಾರೆ. ಕೃಷಿ ಇಲಾಖೆಯವರು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದರು.

ನಿಗದಿತ ದರಕ್ಕೆ ರಸಗೊಬ್ಬರ ಮಾರಾಟ ಮಾಡಲು ಜಂಟಿ ಕೃಷಿ ನಿರ್ದೇಶಕರು ಸೂಚಿಸಿದ್ದು, ಅದರಂತೆಯೇ ತೀವ್ರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ರೈತರಿಗೆ ಆರ್ಥಿಕ ಹೊರೆಯಾಗದಂತೆ ಸಹಕಾರಿ ಸಂಘ ಹಾಗೂ ಖಾಸಗಿ ಗೊಬ್ಬರ ಮಾರಾಟಗಾರರಿಗೆ ಆದೇಶ ನೀಡಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಬಿ.ಶ್ರೀನಿವಾಸಲು ವಿವರಣೆ ನೀಡಿದರು.

ರೈತರು ಎಂಆರ್‌ಪಿ ಬೆಲೆಗೆ ಖರೀದಿ ಮಾಡಬೇಕು ಮತ್ತು ರಶೀದಿ ಪಡೆಯಬೇಕು. ಅಲ್ಲದೇ, ಹೆಚ್ಚಿನ ದರಕ್ಕೆ ಬೇಡಿಕೆಯಿಟ್ಟರೆ, ಇಲಾಖೆಯ ಗಮನಕ್ಕೆ ತಂದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಳೆದ ಬಾರಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದ್ದು, ವಾಡಿಕೆಗಿಂತ ಹೆಚ್ಚಿನ ಮಳೆ ಬಂದಿದೆ. 50 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಕಳೆದ ವರ್ಷ ಬಿತ್ತನೆ ಮಾಡಲಾಗಿತ್ತು. 5480 ಹೆಕ್ಟೇರ್‌ನಲ್ಲಿ ಹಿಂಗಾರು ಬಿತ್ತನೆ ಮಾಡಲಾಗಿದ್ದು, ಉತ್ತಮ ಬೆಳೆ ಬಂದಿದೆ. ಇನ್ನೇನು ಮುಂಗಾರು ಪ್ರಾರಂಭವಾಗಲಿದ್ದು, ಈ ಭಾಗದಲ್ಲಿ ಮೆಕ್ಕೆಜೋಳ ಮತ್ತು ಹತ್ತಿ ಮುಂಗಾರು ಪ್ರಧಾನ ಬೆಳೆಗಳಾಗಿದ್ದು, ಅಗತ್ಯಕ್ಕೆ ತಕ್ಕಂತೆ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ದಾಸ್ತಾನು ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕಳೆದ ಬಾರಿ ವಾಡಿಕೆಗಿಂತ ಶೇ.47 ರಷ್ಟು ಹೆಚ್ಚು ಮಳೆಯಾಗಿ ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಉತ್ತಮ ಬೆಳೆಯಾಗಿದೆ. 2021-22ನೇ ಸಾಲಿನಲ್ಲಿ ಉತ್ತಮ ಮಳೆಯಾಗುವ ಮುನ್ಸೂಚನೆ ಇದ್ದು, ರೈತರಿಗೆ ಖುಷಿ ತರಲಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸಲು ಹೇಳಿದರು.

ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಾನಾಯ್ಕ್, ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಗೆ ಒತ್ತು ನೀಡುವ ಉದ್ದೇಶದಿಂದ ಗ್ರಾ.ಪಂ ಕೇಂದ್ರಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲಾಗುತ್ತಿದೆ. 4 ಗ್ರಾ.ಪಂ. ಗಳಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಈಗ 10 ಗ್ರಾ.ಪಂ.ಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಉಳಿದ ಪಂಚಾಯಿತಿಗಳಲ್ಲಿ ಹಂತ-ಹಂತವಾಗಿ ನಿರ್ಮಿಸಲಾಗುವುದು. ನರೇಗಾದಡಿ ಸುಮಾರು 17.80 ಲಕ್ಷ ರೂ.ಗಳಲ್ಲಿ ತಲಾ ಒಂದೊಂದು ಘಟಕ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕೊರೊನಾ 2ನೇ ಅಲೆ ತೀವ್ರವಾಗಿದ್ದು, ಎಲ್ಲರೂ ಜಾಗ್ರತರಾಗಿರಬೇಕು. ಸಾಮಾಜಿಕ ಅಂತರ, ಮಾಸ್ಕ್ ಬಳಸಬೇಕು. ಗ್ರಾ.ಪಂ ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ರಚಿಸಲಾಗುವುದು ಎಂದು ಇಒ ತಿಳಿಸಿದರು.

ತಾಲ್ಲೂಕಿನಲ್ಲಿ ಸದ್ಯ ಕುಡಿಯುವ ನೀರಿನ ತೊಂದರೆ ಉಂಟಾಗಿಲ್ಲ. ಮುಂಜಾಗ್ರತೆಯಾಗಿ 15 ಹಳ್ಳಿಗಳಲ್ಲಿ ಬೋರ್‌ವೆಲ್ ಕೊರೆಸಲು ಕ್ರಿಯಾ ಯೋಜನೆ ಸಿದ್ದಪಡಿಸಲಾಗಿದೆ ಎಂದು ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ ಎಇಇ ಶಿವಕುಮಾರ್ ಮಾಹಿತಿ ನೀಡಿದರು.

ತಾಲ್ಲೂಕಿನಲ್ಲಿ ಮಾ.3 ರಿಂದ ಈವರೆಗೂ 31 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. 13 ಮಂದಿ ಗುಣಮುಖರಾಗಿದ್ದಾರೆ. 3 ಮಂದಿ ಕ್ವಾರಂಟೈನ್‌ಲ್ಲಿದ್ದಾರೆ. 15 ಪ್ರಕರಣಗಳು ಸಕ್ರಿಯವಾಗಿವೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಾಗರಾಜ್ ಮಾಹಿತಿ ನೀಡಿದರು.

ಯಾಕ್ರೀ ತಪ್ಪು ಮಾಹಿತಿ ಕೊಡ್ತೀರಾ, ತಾಲ್ಲೂಕಿನಲ್ಲಿ ಎಷ್ಟು ಕೊರೊನಾ ಸೋಂಕಿತರಿದ್ದಾರೆಂಬ ಪೂರ್ಣ ಮಾಹಿತಿ ನಿಮಗಿಲ್ಲ. ಗ್ರಾಮೀಣ ಭಾಗದಲ್ಲಿ ಹೆಚ್ಚು ಪ್ರಕರಣಗಳು ಕಂಡು ಬರುತ್ತಿವೆ. ಆರೋಗ್ಯ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮಾಹಿತಿಯೂ ನೀಡುತ್ತಿಲ್ಲ ಎಂದು ತಾ.ಪಂ ಉಪಾಧ್ಯಕ್ಷ ಮುದೇಗೌಡ್ರು ಬಸವರಾಜ್ ಟಿಹೆಚ್‌ಒ ವಿರುದ್ಧ ಕಿಡಿಕಾರಿದರು.

ಪಿಡಬ್ಲ್ಯೂಡಿ ಎಇಇ ರುದ್ರಪ್ಪ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ, ಬಿಸಿಎಂ ಇಲಾಖೆಯ ಆಸ್ಮಾಬಾನು, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮೂರ್ತಿ, ಮತ್ತಿತರರು ಇಲಾಖಾ ಪ್ರಗತಿ ವರದಿ ನೀಡಿದರು.

# ಕೇವಲ ಮಹಿಳೆಯೆಂಬ ಒಂದೇ ಕಾರಣಕ್ಕಾಗಿ ಸ್ಪರ್ಧಿಸುತ್ತಿಲ್ಲ

**ಕಸಾಪ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿ ಡಾ.ಚಿಮ್ಮಲಗಿ**

ದಾವಣಗೆರೆ, ಏ.17- ನಾನು ಕೇವಲ ಮಹಿಳೆ ಎಂಬ ಒಂದೇ ಕಾರಣಕ್ಕಾಗಿ ಸ್ಪರ್ಧಿಸುತ್ತಿಲ್ಲ. ನನ್ನ ಸಾಹಿತ್ಯ ಸಾಧನೆ, ರಂಗ ಕ್ಷೇತ್ರಕ್ಕೆ ನೀಡಿದ ಕೊಡುಗೆ, ಸಾಮಾಜಿಕ ಸೇವೆ, ಮಹಿಳೆಯರ, ಶೋಷಿತರ ಪರ ಹೋರಾಟ ಮತ್ತು ಮಾನವೀಯ ಕಾಳಜಿಗಳು ನನ್ನನ್ನು ಕಸಾಪ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತೆ ಪ್ರೇರೇಪಿಸಿವೆ ಎಂದು ದಾನ ಚಿಂತಾಮಣಿ 'ಅತ್ತಿಮಬ್ಬೆ' ಪ್ರಶಸ್ತಿ ಪುರಸ್ಕೃತ ಸಾಹಿತಿ, ಆಕಾಂಕ್ಷಿ ಡಾ. ಸರಸ್ವತಿ ಚಿಮ್ಮಲಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಏಕೈಕ ಮಹಿಳಾ ಅಭ್ಯರ್ಥಿ ನಾನಾಗಿದ್ದೇನೆ ಎಂದರು. 29ನೇ ಅಧ್ಯಕ್ಷರಾಗಿ ಮಹಿಳೆ ಕನ್ನಡ ಸಾಹಿತ್ಯ ಸರಸ್ವತಿಯ ಸಾರಥ್ಯ ವಹಿಸಿಕೊಳ್ಳಬೇಕೆಂಬುದು ಕನ್ನಡಿಗರ ಮಹದಾಸೆಯಾಗಿದೆ. ಅದರಂತೆ ಸಮಸ್ತ ಸದಸ್ಯರು ನಮಗೆ ತಮ್ಮ ಅಮೂಲ್ಯ ಮತ ನೀಡಿ ಸಾಹಿತ್ಯ ಸರಸ್ವತಿಯ ಸೇವೆಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಸದೃಢ ಮಹಿಳೆಯಾಗಿ, ಜನಪರ ಕಾಳಜಿಯನ್ನಿಟ್ಟುಕೊಂಡು ಸಾಹಿತ್ಯ ಸರಸ್ವತಿಯ ಸೇವೆ ಮಾಡುವ ಹೆಬ್ಬಯಕೆ ನನ್ನದು. ಈಗಿರುವ ಕಸಾಪ ಬೈಲಾದಲ್ಲೂ ಕೂಡ ಬದಲಾವಣೆ ಅಗತ್ಯವಿದೆ ಎಂದ ಅವರು, ಚುನಾವಣೆ ಮೂಲಕವೇ ತಾಲ್ಲೂಕು ಕಸಾಪ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಬೇಕು. ಗೌರವ ಕಾರ್ಯದರ್ಶಿಯ ಎರಡು ಸ್ಥಾನಗಳ ಪೈಕಿ ಒಂದು ಸ್ಥಾನ ಮಹಿಳೆಗೆ ಮೀಸಲಿರಿಸಬೇಕು ಎಂದರು.

ಸಾಹಿತ್ಯಿಕ ಸಂರ್ಭದಲ್ಲಿ ಎಲ್ಲಾ ಹಂತಗಳಲ್ಲಿ ಮಹಿಳೆಯರಿಗೆ ಸಮಾನ ಆದ್ಯತೆ ನೀಡುವುದು, 5 ವರ್ಷಗಳ ಅವಧಿಯಲ್ಲಿ 2 ಸಾಮಾನ್ಯ, 2 ಮಹಿಳಾ ಹಾಗೂ 1 ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಅಭಿಲಾಶೆ ಹೊಂದಿರುವುದಾಗಿ ತಿಳಿಸಿದರು.

ಗಡಿನಾಡು ಸಮ್ಮೇಳನ ಆಯೋಜನೆ, ರಾಜ್ಯಮಟ್ಟದಿಂದ ಹಳ್ಳಿಯವರೆಗೆ ಸಾಹಿತ್ಯ ಸರಸ್ವತಿ ಕೊಂಡೊಯ್ಯುವುದು ಮುಂತಾದ ಯೋಜನೆಗಳನ್ನು ಕೈಗೊಳ್ಳುವ ಗುರಿ ಹೊಂದಿದ್ದೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬರಹಗಾರ ಮಲ್ಲಿಕಾರ್ಜುನ ಕಡಕೊಳ, ಅಶ್ವಿನಿ ತಳವಾರ ಉಪಸ್ಥಿತರಿದ್ದರು.

# ಉಪ ಚುನಾವಣೆಯಲ್ಲಿ ಶೇ.56.37ರಷ್ಟು ಮತದಾನ

ಬೆಂಗಳೂರು, ಏ. 17 – ಒಂದು ಲೋಕಸಭೆ ಹಾಗೂ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಮತದಾನ ಶಾಂತಿಯುತವಾಗಿ ಪೂರ್ಣಗೊಂಡಿದ್ದು, ಶೇ.56.37ರ ಮತದಾನವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗಾವಿ ಲೋಕಸಭಾ ಚುನಾವಣೆಯಲ್ಲಿ ಶೇ.54.35ರ ಮತದಾನವಾಗಿದೆ. ಬಸವಕಲ್ಯಾಣದಲ್ಲಿ ಶೇ.59.57 ಹಾಗೂ ಮಸ್ಕಿಯಲ್ಲಿ ಶೇ. 70.48ರ ಮತದಾನವಾಗಿದೆ.

# ಕೋವಿಡ್ ಕೇರ್ ಸೆಂಟರ್ ತೆರೆಯಲು ಚಿಂತನೆ



**(1ನೇ ಪುಟದಿಂದ)** ಮಾಡಿಕೊಳ್ಳಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಏ. 22 ರ ಬಳಿಕ ಹಾಸ್ಟೆಲ್‌ಗಳು ಬಳಕೆಗೆ ಲಭ್ಯವಾಗಲಿವೆ ಎಂದರು.

ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲೂ ಕೊರೊನಾ ರೋಗಿಗಳ ಚಿಕಿತ್ಸೆಗಾಗಿ ಬೆಡ್‌ಗಳನ್ನು ಕಾಯ್ದಿರಿಸಬೇಕು.

ಅಗತ್ಯ ಬೆಡ್, ಐಸಿಯು ಹಾಗೂ ವೆಂಟಿಲೇಟರ್ ಮತ್ತು ವೈದ್ಯಕೀಯ ಉಪಕರಣ ಗಳನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳಬೇಕು.

ಜಿಲ್ಲಾ ಆರೋಗ್ಯ ಅಧಿಕಾರಿಗಳು ಸರ್ಕಾರಿ ಆಸ್ಪತ್ರೆಗಳಿಗೆ ಖುದ್ದಾಗಿ ಭೇಟಿ ನೀಡಿ ಸುಸ್ಥಿತಿಯಲ್ಲಿರುವ ಕುರಿತು ದೃಢೀಕರಣವನ್ನು ಎರಡು ದಿನಗಳಲ್ಲಿ ಸಲ್ಲಿಸಬೇಕು ಎಂದು ಬೀಳಗಿ ತಿಳಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳು ಅಗತ್ಯವಿಲ್ಲದಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ರೆಮ್‌ಡೆಸಿವಿಆರ್ ಚುಚ್ಚು ಮದ್ದನ್ನು ಕೇಳುತ್ತಿದ್ದಾರೆ ಎನ್ನುವ ವಿಷಯವಾಗಿ ಮಾತನಾಡಿದ ಎಸ್ಪಿ ಹನುಮಂತರಾಯ, ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯಂತೆಯೇ ಚುಚ್ಚುಮದ್ದನ್ನು ಬಳಸಬೇಕು. ಕರ್ನಾಟಕ ವಿಪತ್ತು ನಿರ್ವಹಣೆ ಕಾಯ್ದೆ ಉಲ್ಲಂಘಿಸುವವರ ವಿರುದ್ಧ ಜಾಮೀನು ರಹಿತ ವಾರೆಂಟ್ ಹೊರಡಿಸಲಾಗುವುದು. ಅಲ್ಲದೇ ಅಪರಾಧಕ್ಕೆ 50,000 ದಂಡ ಮತ್ತು 3 ವರ್ಷಗಳ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ ಎಂದರು.

## 4 ಸಾವಿರ ಟೆಸ್ಟ್ ಮಾಹಿತಿ ಬಾಕಿ

ಜಿಲ್ಲೆಯಲ್ಲಿ ಸುಮಾರು 4 ಸಾವಿರಕ್ಕೂ ಹೆಚ್ಚು ಕೊರೊನಾ ಟೆಸ್ಟ್ ದತ್ತಾಂಶವನ್ನು ಐಸಿಎಮ್‌ಆರ್ ಪೋರ್ಟಲ್‌ನಲ್ಲಿ ಅಳವಡಿಸುವ ಕಾರ್ಯ ಬಾಕಿ ಉಳಿದಿರುವ ವಿಷಯ ತಿಳಿದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೊರೊನಾ ಟೆಸ್ಟ್ ವರದಿಯ ದತ್ತಾಂಶವನ್ನು ಪೋರ್ಟಲ್‌ನಲ್ಲಿ ದಾಖಲಿಸಲು ಅಗತ್ಯ ಕಂಪ್ಯೂಟರ್ ಹಾಗೂ ಸಿಬ್ಬಂದಿಯನ್ನು ಒದಗಿಸುವಂತೆ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಉಪ ವಿಭಾಗಾಧಿಕಾರಿ ಮಮತ ಹೊಸಗೌಡರ್, ಜಿಲ್ಲಾಸ್ಪತ್ರೆ ಸರ್ಜನ್ ಡಾ. ಜಯಪ್ರಕಾಶ್, ಡಿಹೆಚ್‌ಓ ಡಾ. ನಾಗರಾಜ್, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕಿ ಕೌಸರ್ ರೇಷ್ಮಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ ಸೇರಿದಂತೆ ವಿವಿಧ ಆಸ್ಪತ್ರೆಗಳ ತಜ್ಞ ವೈದ್ಯರು, ನಾನಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ಕರ್ನಾಟಕ-ಕನ್ನಡ-ಕನ್ನಡಿಗರ ಸೇವೆಯ ಆಕಾಂಕ್ಷಿಯೇ ಹೊರತು, ಸ್ಪರ್ಧಿ ಅಲ್ಲ

## ಚುನಾವಣಾ ಪ್ರಚಾರ ಸಭೆಯಲ್ಲಿ ನಾಡೋಜ ಡಾ. ಮಹೇಶ ಜೋಶಿ



ದಾವಣಗೆರೆ, ಏ.17- ಕನ್ನಡ ಸಾಹಿತ್ಯ ಪರಿಷತ್ತಿನ ಮುಖೇನ ಕರ್ನಾಟಕ, ಕನ್ನಡ, ಕನ್ನಡಿಗರ ಸೇವೆ ಮಾಡುವ ಆಕಾಂಕ್ಷಿಯೇ ಹೊರತು ಅಭ್ಯರ್ಥಿ ಅಥವಾ ಸ್ಪರ್ಧಿ ಅಲ್ಲ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸ್ಥಾನದ ಸೇವಾಕಾಂಕ್ಷಿ ನಾಡೋಜ ಡಾ. ಮಹೇಶ ಜೋಶಿ ತಿಳಿಸಿದರು.

ಅವರು, ಇಂದು ಸಂಜೆ ನಗರದ ಸೋಮೇಶ್ವರ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ, ಕರಾವಳಿ ಕರ್ನಾಟಕ, ಮಧ್ಯ ಕರ್ನಾಟಕ, ಹಳೇ ಮೈಸೂರು ಭಾಗದವನೆಂದು ಗುರುತಿಸಿಕೊಳ್ಳದೇ ಅಖಂಡ ಕರ್ನಾಟಕದ ಪ್ರತಿನಿಧಿಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇವೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಮೊದಲಿನಿಂದಲೂ ಯಾವುದೇ ರಾಜಕೀಯ ಪಕ್ಷದ ಜೊತೆಗೆ ಗುರುತಿಸಿಕೊಳ್ಳದೇ ತಟಸ್ಥನಾಗಿದ್ದು ಎಡಪಂಥ, ಬಲಪಂಥ ಹಾಗೂ ಯಾವುದೇ ಪಂಥಕ್ಕೆ ಸೇರಿದವನಾಗದೇ ಮಾನವ ಪಂಥದ ಮೌಲ್ಯಗಳಿಗೆ ಕನ್ನಡ ಪಂಥದ ಸೇವಕನಾಗಿ ಕಾರ್ಯನಿರ್ವಹಿಸುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತಿಗೆ ರಾಜಕೀಯ ಸಲ್ಲ. ರಾಜಕೀಯವೆಂಬ ನದಿಯಲ್ಲಿ ಕಸಾಪ ತೇಲುವ ದೋಣಿಯಾಗಬೇಕೇ ಹೊರತು ಮುಳುಗುವಂತಾಗಬಾರದು ಎಂದು ಅಭಿಪ್ರಾಯಪಟ್ಟರು.

ಕನ್ನಡ ಕೆಲಸ ಮಾಡುತ್ತಿರುವ ಕನ್ನಡ ಸಂಘಟನೆಗಳನ್ನು ಬಲಪಡಿಸಿ, ಅಲ್ಲಿರುವ ಅನಿವಾಸಿ ಕನ್ನಡ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿ ಕನ್ನಡ ಸಮ್ಮೇಳನಗಳನ್ನು ಏರ್ಪಡಿಸಿ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡಕ್ಕೆ ಗೌರವ, ಮನ್ನಣೆ ತರುತ್ತೇನೆ. ಸರ್ಕಾರದೊಂದಿಗೆ ಕೈ ಜೋಡಿಸಿ ವಿಶ್ವ ಕನ್ನಡ ಸಮ್ಮೇಳನ ಏರ್ಪಡಿಸಲು ಭಗೀರಥ ಪ್ರಯತ್ನ ಮಾಡುತ್ತೇನೆಂದರು.

ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಆಧುನಿಕ ಸೌಲಭ್ಯಗಳೊಂದಿಗೆ ಕನ್ನಡ ಭವನ ನಿರ್ಮಾಣಕ್ಕೆ ಆದ್ಯತೆ ನೀಡುತ್ತೇನೆ. ಹಳ್ಳಿಗಳಲ್ಲಿ ಸಾಹಿತ್ಯ ಪರಿಷತ್ ಬೆಳವಣಿಗೆ ಮಾಡುತ್ತೇನೆ. ಕನಿಷ್ಠ ಇಬ್ಬರು ಮಹಿಳೆಯರನ್ನು ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡುತ್ತೇನೆ. ಕನ್ನಡ ಸಾಹಿತ್ಯ ಪರಿಷತ್ತನ್ನು ಜನಪರ, ಜನೋಪಯೋಗಿಯಾಗಿ ಜನಸಾಮಾನ್ಯರ ಪರಿಷತ್ತನ್ನಾಗಿ ಮಾರ್ಪಡಿಸುತ್ತೇನೆ. ಈಗಿರುವ ಆಜೀವ ಸದಸ್ಯರ 500 ರೂ. ಶುಲ್ಕವನ್ನು 250 ರೂ.ಗೆ ಇಳಿಸುವೆನೆಂದರು.

ಭಾರತ ಸೇನೆ, ಅರೆಸೇನೆಯಲ್ಲಿ ಸೇವೆ ಸಲ್ಲಿಸಿರುವ, ಸಲ್ಲಿಸುತ್ತಿರುವ ಕನ್ನಡದ ಸೈನಿಕರಿಗೆ ಹಾಗೂ ವಿಶೇಷ ಚೇತನರಿಗೆ ಯಾವುದೇ ಶುಲ್ಕವಿಲ್ಲದೇ ಮನೆಗೇ ಹೋಗಿ ಆಜೀವ ಸದಸ್ಯತ್ವ ನೀಡಿ ಗೌರವಿಸುತ್ತೇನೆ. ನನ್ನ ಅವಧಿಯಲ್ಲಿ ಯಾವುದೇ ಕನ್ನಡ ಶಾಲೆಗಳು ಮುಚ್ಚಲು ಬಿಡುವುದಿಲ್ಲ. ಮುಚ್ಚಿರುವ ಕನ್ನಡ ಶಾಲೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರದ ಮೇಲೆ ನಿರಂತರ ಒತ್ತಡ ಹಾಕುತ್ತೇನೆ. ಕೆಲ ಸ್ಪರ್ಧಾತ್ಮಕ, ಉನ್ನತ ಪರೀಕ್ಷೆಗಳನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಮಾತ್ರ ಬರೆಯುವಂತಾಗಿದ್ದು, ಕನ್ನಡದಲ್ಲಿ ಬರೆಯುವಂತಹ ಅವಕಾಶಕ್ಕೆ ಪ್ರಯತ್ನಿಸುತ್ತೇನೆ. ಈ ಬಗ್ಗೆ ಆಡಳಿತಾತ್ಮಕವಾಗಿ ಚರ್ಚಿಸಲಿದ್ದು, ವಿಫಲತೆ ಕಂಡರೆ ಹೈಕೋರ್ಟ್ ಮೊರೆ ಹೋಗುತ್ತೇನೆಂದರು.

ಸಭೆಯಲ್ಲಿ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಅರಳಿ ನಾಗರಾಜ್, ಹಿರಿಯರಾದ ಜಗಳೂರಿನ ಸುಭಾಷ್ಚಂದ್ರ ಬೋಸ್, ಕೆ.ಎನ್. ಸ್ವಾಮಿ, ಮಹಾಲಿಂಗಪ್ಪ ಮಾತನಾಡಿದರು.

ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಸೋಮೇಶ್ವರ ಶಾಲೆಯ ಗೌರವ ಕಾರ್ಯದರ್ಶಿ ಕೆ.ಎನ್. ಸುರೇಶ್, ರುದ್ರೇಶ್, ಸಿದ್ದಪ್ರಸಾದ್, ಶಾಂತಪ್ಪ ಪೂಜಾರಿ ಸೇರಿದಂತೆ ಇತರರು ವೇದಿಕೆ ಮುಂಭಾಗದಲ್ಲಿ ಹಾಜರಿದ್ದರು. ಸಾಲಿಗ್ರಾಮ ಗಣೇಶ್ ಶೆಣೈ ನಿರೂಪಿಸಿ, ವಂದಿಸಿದರು. ಕೆ. ರಾಘವೇಂದ್ರ ನಾಯರಿ ಸ್ವಾಗತಿಸಿದರು.

## ರಾಜಧಾನಿಯಲ್ಲಿ ಕೊರೊನಾ ಗಂಭೀರ; 24 ಸಾವಿರ ದಾಟಿದ ಸೋಂಕು

ನವದೆಹಲಿ, ಏ. 17 – ರಾಜಧಾನಿ ದೆಹಲಿಯಲ್ಲಿ ಶನಿವಾರ 24 ಸಾವಿರಕ್ಕೂ ಹೆಚ್ಚು ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ದೆಹಲಿಯಲ್ಲಿ ಪರಿಸ್ಥಿತಿ ಅತಿ ಗಂಭೀರವಾಗಿದೆ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ರಾಜಧಾನಿಯಲ್ಲಿ ಆಕ್ಸಿಜನ್ ಹಾಗೂ ಔಷಧಿಗಳ ಕೊರತೆಯಾಗಿದೆ ಎಂದಿರುವ ಅವರು, ಆಸ್ಪತ್ರೆಗಳಲ್ಲಿ ಖಾಲಿ ಇರುವ ಬೆಡ್‌ಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಬೆಡ್ ಸಂಖ್ಯೆ ಹೆಚ್ಚಿಸಲು ಕ್ರಮ ತೆಗೆದುಕೊಳ್ಳ ಲಾಗುತ್ತಿದೆ ಎಂದಿದ್ದಾರೆ. ಶನಿವಾರ 24,375 ಸೋಂಕಿತರು ಕಂಡು ಬಂದಿದ್ದಾರೆ. ಇದಕ್ಕೂ ಮುಂಚೆ ದೆಹಲಿಯಲ್ಲಿ ಮೂರನೆ ಅಲೆಯಲ್ಲಿ 8,593 ಸೋಂಕಿತರು ಒಂದೇ ದಿನ ಕಂಡು ಬಂದಿದ್ದರು.

# ಜಾತ್ರೆಗಳು ನಿಷೇಧ ಮದುವೆಗೂ ಪಾಸ್

**(1ನೇ ಪುಟದಿಂದ)** ಜಾತ್ರೆಗಳು ನಡೆದಿದ್ದೇ ಆದಲ್ಲಿ ಅದರ ಹೊಣೆಗಾರಿಕೆಯನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹೊಣೆ ವಹಿಸಿಕೊಳ್ಳಬೇಕಾಗುತ್ತದೆ. ಸಾಂಕ್ರಾಮಿಕ ರೋಗ ತಡೆಯಲು ಸರ್ಕಾರ ಈಗಾಗಲೇ ಅನುಷ್ಠಾನಗೊಳಿಸಿರುವ ನಿಯಮಾವಳಿಗಳನ್ನು ಜಿಲ್ಲಾಡಳಿತ ಚಾಚೂ ತಪ್ಪದೇ ಜಾರಿಗೊಳಿಸಬೇಕು ಎಂದು ತಿಳಿಸಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಸ್ಪತ್ರೆಯಿಂದಲೇ ಸೋಮವಾರ ವಿಡಿಯೋ ಕಾನ್ಫರೆನ್ಸ್ ಮಾಡಿ, ಕೊರೊನಾ ಸಂಬಂಧ ಕೆಲವು ಕಠಿಣ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಧ್ಯತೆಯೂ ಇದೆ.

ಸೋಂಕಿತರಿಗೆ ಅಗತ್ಯವಾಗಿರುವ ಆಕ್ಸಿಜನ್ ದೊರಕಿಸಲು ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದೆ. ಅಷ್ಟೇ ಅಲ್ಲ ರೋಗ ನಿವಾರಕ ಔಷಧಿಗಳನ್ನು ಸಂಗ್ರಹಿಸಿ, ಸರಬರಾಜು ಮಾಡಲು ಜಿಲ್ಲಾಡಳಿತಕ್ಕೆ ವಹಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಮೊದಲನೇ ಅಲೆಗಿಂತ ಎರಡನೇ ಅಲೆ ಸೋಂಕು ವ್ಯಾಪಕವಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಕಳೆದ ಬಾರಿಗಿಂತ ಈ ಬಾರಿ ಶೇ. 50 ರಷ್ಟು ಹಾಸಿಗೆಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

ಮೂರನೇ ಸೋಂಕು ಬರುವ ಮುನ್ನವೇ ಸರ್ಕಾರ ಮತ್ತು ಜನತೆ ಎಚ್ಚೆತ್ತುಕೊಳ್ಳಬೇಕಾಗಿದೆ. ಇದರ ಪರಿಣಾಮ ಶೇ. 10 ಕ್ಕಿಂತ ಹೆಚ್ಚಾಗದಂತೆ ನೋಡಿಕೊಳ್ಳಲು ನಾವು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತೇವೆ. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕು. ಮೂರನೇ ಅಲೆ ತಪ್ಪಿಸಲು ಎಲ್ಲರೂ ಕಡ್ಡಾಯವಾಗಿ ಲಸಿಕೆಗಳನ್ನು ಪಡೆಯಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು. ರಾಜ್ಯದಲ್ಲಿ ಲಸಿಕೆಗೆ ಕೊರತೆ ಇಲ್ಲ. ನಮಗೆ ಅಗತ್ಯವಿರುವಷ್ಟು ಲಸಿಕೆಗಳನ್ನು ಕೇಂದ್ರ ನೀಡುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

# ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕು ರಾಜ್ಯ ಹೆದ್ದಾರಿ ರಸ್ತೆ ಬದಿಯಲ್ಲಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿ ನಿರ್ವಹಿಸುವ ಸಲುವಾಗಿ 220/66 ಕೆ.ವಿ. ದಾವಣಗೆರೆ ಎಸ್ ಆರ್ ಎಸ್ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್-9 ಶಾಮನೂರು ಮತ್ತು ಜೆ.ಹೆಚ್.ಪಿ-1 ಮತ್ತು 2 11 ಕೆವಿ ವಿದ್ಯುತ್ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಶಾಮನೂರು, ಜೆ.ಹೆಚ್.ಪಟೇಲ್ ನಗರ, ಸಂಭ್ರಮ ಹೋಟೆಲ್ ಸುತ್ತಮುತ್ತ, ಹೊಸ ಮತ್ತು ಹಳೇ ಕುಂದವಾಡ, ಕೆ.ಹೆಚ್.ಬಿ. ಕಾಲೋನಿ, ಜರೀಕಟ್ಟೆ, ಮುದಹದಡಿ ನಗರಗಳಿಗೆ ಇಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

# ಚೆನ್ನಮ್ಮ ವಸತಿ ಶಾಲೆಯಲ್ಲಿ 100 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್

**ಹರಪನಹಳ್ಳಿ**

ಹರಪನಹಳ್ಳಿ, ಏ.17- ಕೊರೊನಾ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತ, ಅನಂತನಹಳ್ಳಿ ಬಳಿ ಇರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ 100 ಹಾಸಿಗೆಗಳುಳ್ಳ ಕೋವಿಡ್ ಕೇರ್ ಸೆಂಟರ್ ಆರಂಭ ಮಾಡಲಾಗಿದೆ ಎಂದು ತಹಶೀಲ್ದಾರ್ ಎಲ್.ಎಂ. ನಂದೀಶ್ ತಿಳಿಸಿದ್ದಾರೆ. ಜಾತ್ರೆ, ಉತ್ಸವ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾಗಿದೆ.

ಈ ಕುರಿತು ಸುದ್ದಿ ಗಾರರಿಗೆ ಮಾಹಿತಿ ನೀಡಿದ ಅವರು ಹರಪನಹಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ 50 ಬೆಡ್‌ಗಳನ್ನು ಕೋವಿಡ್ ಸೋಂಕಿತರ ಚಿಕಿತ್ಸೆಗೆ ಮೀಸಲಿಡಲಾಗಿದೆ. 49 ಆಕ್ಸಿಜನ್ ಸಿಲಿಂಡರ್, 5 ವೆಂಟಿಲೇಟರ್‌ಗಳನ್ನು ಸಿದ್ಧತೆಯಲ್ಲಿ ಇಡಲಾಗಿದೆ. ಆರ್‌ಡಿಪಿಆರ್ , ಪೊಲೀಸ್ ಹಾಗೂ ಪುರಸಭೆ ಅಧಿಕಾರಿಗಳ ಸಭೆಗಳನ್ನು ನಡೆಸಿದ್ದು, ಪ್ರತಿಯೊಂದು ಇಲಾಖೆಯವರು ಪ್ರತಿ ದಿನ ಮಾಸ್ಕ್ ಧರಿಸದ 100 ಜನರಿಗೆ ದಂಡ ವಿಧಿಸಬೇಕು ಹಾಗೂ ಮಾಸ್ಕ್ ಹಾಕಲು ಪ್ರೇರೇಪಿಸಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.


ತಾಲ್ಲೂಕಿನಲ್ಲಿ 51 ಸಬ್ ಸೆಂಟರ್ ಗಳಿದ್ದು, ಅಲ್ಲಿ 45 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಕೋವಿಡ್ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿಕೊಳ್ಳಬೇಕು. ಏ.30 ರವರೆಗೆ ತಾಲ್ಲೂಕಿನಾದ್ಯಂತ ಯಾವುದೇ ಸಭೆ, ಸಮಾರಂಭಗಳು, ಧಾರ್ಮಿಕ ಕಾರ್ಯಕ್ರಮಗಳು, ಜಾತ್ರೆ, ರಥೋತ್ಸವ ಹಾಗೂ ಹಬ್ಬಗಳನ್ನು ಮಾಡದಂತೆ ನಿರ್ಬಂಧಿಸಿ ಆದೇಶ ಮಾಡಲಾಗಿದೆ. ಆದೇಶ ಉಲ್ಲಂಘಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ್ ಮಾಹಿತಿ ನೀಡಿ ತಾಲ್ಲೂಕಿನಲ್ಲಿ 75 ಜನ ಕೋವಿಡ್ ಸೋಂಕಿತರಿದ್ದು, 41 ಜನರು ಪಟ್ಟಣದಲ್ಲಿ ಹಾಗೂ 32 ಜನರು ಗ್ರಾಮೀಣ ಭಾಗದಲ್ಲಿ ಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಸಿರಾಟದ ತೊಂದರೆ ಇರುವ ಇಬ್ಬರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಅವರು ತಿಳಿಸಿದರು.

# ನಗರದಲ್ಲಿ ನಾಲ್ಕು ಲಸಿಕಾ ಕೇಂದ್ರಗಳು

ದಾವಣಗೆರೆ, ಏ.17- ನಗರದ ದೊಡ್ಡಪೇಟೆ ಐನಳ್ಳಿ ಚನ್ನಬಸಪ್ಪ ಆಸ್ಪತ್ರೆ, ಪಿ.ಜೆ. ಬಡಾವಣೆಯ ಸೂಪರ್ ಮಾರ್ಕೆಟ್, ಲೋಕಿಕೆರೆ ರಸ್ತೆ, ಬಸವ ಬುದ್ಧ ಭೀಮ ನಗರ, ಚಿಗಟೇರಿ ಆಸ್ಪತ್ರೆ ಹಾಗೂ ಚಾಮರಾಜ ಪೇಟೆ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕೆ ಹಾಕುತ್ತಾರೆ.

## ಮಲೇಬೆನ್ನೂರು ಪಟ್ಟಣದ ನಾಗಮ್ಮ ನಿಧನ



ಮಲೇಬೆನ್ನೂರು ಪಟ್ಟಣದ ದಿ.ವೆಂಕಟೇಶಪ್ಪ ಅವರ ಧರ್ಮಪತ್ನಿ ಶ್ರೀಮತಿ ನಾಗಮ್ಮ (98) ಅವರು ದಿನಾಂಕ 17.04.2021ರ ಶನಿವಾರ ಮಧ್ಯಾಹ್ನ 3.10 ಕ್ಕೆ ನಿಧನರಾದರು. ಪುರಸಭೆ ನಾಮಿನಿ ಟಿ ವಾಸಪ್ಪ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.04.2021ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಮಲೇಬೆನ್ನೂರಿನಲ್ಲಿ ನೆರವೇರಲಿದೆ.

# ಆಸ್ತಿಗಾಗಿ ಸುಪಾರಿ ನೀಡಿ, ಮಾವನನ್ನೇ ಹತ್ಯೆಗೈದಿದ್ದ ಸೊಸೆ ಬಂಧನ

ದಾವಣಗೆರೆ, ಏ.17- ಆಸ್ತಿ ಸಲುವಾಗಿ ಪ್ರಿಯಕರನಿಗೆ ಸುಪಾರಿ ನೀಡಿ, ಮಾವನನ್ನೇ ಹತ್ಯೆಗೈದಿದ್ದ ಸೊಸೆ ಹಾಗೂ ಆಕೆಯ ಪ್ರಿಯಕರ ಮತ್ತು ಓರ್ವ ಆರೋಪಿಯನ್ನು ಬಂಧಿಸುವಲ್ಲಿ ಚನ್ನಗಿರಿ ಪೊಲೀಸರು ಯಶಸ್ವಿಯಾಗಿದ್ದಾರೆ.

ವನಜಾಕ್ಷಿ, ಹನುಮಂತಪ್ಪ, ನಾಗರಾಜ ಬಂಧಿತರು. ಚನ್ನಗಿರಿ ತಾಲ್ಲೂಕಿನ ಶ್ರೀನಿವಾಸಪುರ ಗ್ರಾಮದ ನಿವೃತ್ತ ಶಿಕ್ಷಕ ಚಿಕ್ಯಾನಾಯ್ಕ ಹತ್ಯೆಯಾದ ವ್ಯಕ್ತಿ. ಆರೋಪಿತೆ ವನಜಾಕ್ಷಿಯು ಮೃತ ಚಿಕ್ಯಾನಾಯ್ಕನ ದೊಡ್ಡ ಮಗನ ಸೊಸೆ.

**ಆಸ್ತಿ ಕೈ ತಪ್ಪಬಾರದೆಂದು ಹತ್ಯೆ:** ಮೃತ ಚಿಕ್ಯಾನಾಯ್ಕ ಶ್ರೀನಿವಾಸಪುರದಲ್ಲಿ ತನ್ನ ಹೆಂಡತಿ, ಮಕ್ಕಳು, ಸೊಸೆಯಂದಿರೊಂದಿಗೆ ತೋಟ, ಮನೆ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡು ಹೋಗುತ್ತಿದ್ದರು. ದೊಡ್ಡ ಮಗ ಮನೋಹರ್‌ಗೆ ಮನೆ ಕಟ್ಟಿಸುತ್ತಿದ್ದರು. ಅದೇ ರೀತಿ ಎರಡನೇ ಮಗ ಸುರೇಶ್‌ನಾಯ್ಕನಿಗೂ ಮನೆ ಕಟ್ಟಿಸಿಬೇಕೆಂದು ತೀರ್ಮಾನಿಸಿದ್ದರು. ದೊಡ್ಡ ಮಗನ ಸೊಸೆ ವನಜಾಕ್ಷಿ ಮೇಸ್ತ್ರಿ ಹನುಮಂತಪ್ಪನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಳು. ಸುರೇಶ್‌ನಾಯ್ಕನಿಗೆ ಮನೆ ಕಟ್ಟಿಸಲು ಪ್ರಾರಂಭಿಸಿದರೆ ತನಗೆ ಯಾವುದೇ ಆಸ್ತಿ, ಹಣ ಸಿಗುವುದಿಲ್ಲ ಎಂದು ಪಿತೂರಿ ನಡೆಸಿ, ತನ್ನ ಪ್ರಿಯಕರ ಹನುಮಂತಪ್ಪ ಮತ್ತು ನಾಗರಾಜಗೆ ಮಾವನನ್ನು ಕೊಲೆ ಮಾಡಲು 6 ಲಕ್ಷ ರೂ.ಗೆ ಸುಪಾರಿ ನೀಡಿದ್ದು, ಅದರಂತೆ ಹನುಮಂತಪ್ಪನಿಗೆ 1 ಲಕ್ಷ ರೂ. ಹಣವನ್ನು ಮುಂಗಡವಾಗಿ ನೀಡಲಾಗಿತ್ತು. ಹನುಮಂತಪ್ಪನು ತನ್ನ ಜೊತೆ ಕೆಲಸ ಮಾಡುತ್ತಿದ್ದ ನಾಗರಾಜ್ ಅಲಿಯಾಸ್ ರಜನಿಯೊಂದಿಗೆ ಸೇರಿ ಏ.4, 2021ರಂದು ತುಂಡು ಸೀರೆಯಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿಸಿ ಸಾಕ್ಷ್ಯ ನಾಶಪಡಿಸಿದ್ದರು.

ಅದೇ ದಿನ ಚಿಕ್ಯಾನಾಯ್ಕನ ಸಾವಿನ ಬಗ್ಗೆ ಅನುಮಾನಿಸಿ ಚಿಕ್ಯಾನಾಯ್ಕನ ಎರಡನೇ ಮಗ ಸುರೇಶ್ ನಾಯ್ಕ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದರು.

ಸಿ.ಜಿ. ಆಸ್ಪತ್ರೆಯಲ್ಲಿ ಮೃತನ ಶವ ಪರೀಕ್ಷೆ ನಡೆಸಿದಾಗ, ತೆಳುವಾದ ಬಟ್ಟೆಯಿಂದ ಕುತ್ತಿಗೆಗೆ ಬಿಗಿದು ಸಾಯಿಸಿರುವುದಾಗಿ ಬಂದ ವರದಿ ಆಧರಿಸಿ ಏ.8,2021ರಂದು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಚುರುಕುಗೊಳಿಸಿದರು.

ಪ್ರಕರಣದ ಆರೋಪಿಗಳ ಪತ್ತೆಗೆ ಎಸ್ಪಿ ಹನುಮಂತರಾಯ, ಎಎಸ್ಪಿ ರಾಜೀವ್, ಚನ್ನಗಿರಿ ಪೊಲೀಸ್ ಉಪಾಧೀಕ್ಷಕ ಕೆ.ಎಂ. ಸಂತೋಷ್ ಮಾರ್ಗದರ್ಶನದಲ್ಲಿ ಸಿಪಿಐ ಪಿ.ಬಿ. ಮಧು ನೇತೃತ್ವದಲ್ಲಿ ಪಿಎಸ್‌ಐಗಳಾದ ಜಗದೀಶ್, ರೂಪ್ಲಿಬಾಯಿ ಹಾಗೂ ಸಿಬ್ಬಂದಿಗಳಾದ ರುದ್ರೇಶ್, ಮೊಹಮ್ಮದ್ ಖಾನ್, ಧರ್ಮಪ್ಪ, ಶ್ರೀನಿವಾಸಮೂರ್ತಿ, ಪರಶುರಾಮ್, ಅರುಣ್ ಕುಮಾರ್, ರೇವಣಸಿದ್ದಪ್ಪ ಒಳಗೊಂಡ ತಂಡ ರಚಿಸಲಾಗಿತ್ತು. ಇಂದು ಮೂವರು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಕೊಲೆಗೈದ ಸತ್ಯ ಬಾಯಿ ಬಿಟ್ಟಿದ್ದಾರೆ.

# ಮನೆ ಬೀಗ ಮುರಿದು ಕಳ್ಳತನ

ಹರಿಹರ, ಏ.17- ಮನೆ ಬೀಗ ಮುರಿದು ಕಳ್ಳತನ ಮಾಡಿ ಕಳ್ಳರು ಪರಾರಿಯಾಗಿರುವ ಘಟನೆ ನಗರದ ವಿದ್ಯಾನಗರದ ಸಿ ಬ್ಲಾಕ್ 3 ನೇ ಕ್ರಾಸ್ ನಲ್ಲಿ ನಡೆದಿದೆ.

ಶಿಕ್ಷಕ ರಮೇಶ್ ಅವರ ಮನೆಯಲ್ಲಿ ಚಾಲಾಕಿ ಕಳ್ಳರು ಇಂಟರ್ ಲಾಕ್ ಬೀಗವನ್ನು ಕಬ್ಬಿಣದ ಸಲಾಕೆಯಿಂದ ಒಡೆದು ಮನೆಯೊಳಗೆ ಪ್ರವೇಶಿಸಿ ವಸ್ತುಗಳನ್ನು ದೋಚಿಕೊಂಡು ಪರಾರಿಯಾಗಿದ್ದಾರೆ. ಚಾಲಾಕಿ ಕಳ್ಳರು ಮನೆಯಲ್ಲಿ ಯಾರು ಇಲ್ಲದ ಸಮಯವನ್ನು ನೋಡಿಕೊಂಡು ಕಳ್ಳತನ ಮಾಡಿದ್ದಾರೆ. ಮನೆಯಲ್ಲಿ ಇರುವವರು ಇನ್ನೂ ಊರಿನಿಂದ ಬರದೇ ಇರುವುದರಿಂದ ಎಷ್ಟು ಹಣದ ವಸ್ತುಗಳು ಮತ್ತು ಹಣ ಕಳ್ಳತನವಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶ್ವಾನ ದಳ, ಬೆರಳಚ್ಚು ತಜ್ಞರು, ನಗರ ಠಾಣೆ ಪಿಎಸ್ ಐ. ಸುನಿಲ್ ಬಸವರಾಜ ತೇಲಿ, ಕ್ರೈಮ್ ಪಿಎಸ್‌ಐ ಲತಾ ತಾವಳಕೇರ್ ಮತ್ತು ಪೊಲೀಸ್ ಸಿಬ್ಬಂದಿಗಳು ಮನೆ ಕಳ್ಳತನವಾಗಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ರಾಶಿ ಭವಿಷ್ಯ

**ದಿನಾಂಕ : 18.04.2021 ರಿಂದ 24.04.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಸಂಪನ್ಮೂಲದ ಕ್ರೋಢೀಕರಣಕ್ಕೆ ಪ್ರಯತ್ನಿಸಿ, ಸಂಬಂಧಿಗಳಿಂದ, ಆಸ್ತಿ ಮೇಲಿದ್ದ ತಕರಾರು ಸುಖಾಂತ್ಯ, ವಾಹನಗಳಲ್ಲಿ ಎಚ್ಚರವಿರಲಿ, ರಾತ್ರಿವೇಳೆ ಪ್ರಯಾಣ ಸೂಕ್ತವಲ್ಲ. ಉದ್ಯೋಗ ನಿಮಿತ್ತ ಪರಸ್ಥಳದಲ್ಲಿ ವಾಸಿಸುವುದು, ಪ್ರಾಕೃತಿಕ ವಸ್ತುಗಳನ್ನು ಮಾರುವವರ ವಹಿವಾಟು ಹೆಚ್ಚಲಿದೆ. ಆರೋಗ್ಯದ ವಿಷಯದಲ್ಲಿ ಉದಾಸೀನತೆ ಸಲ್ಲದು. ಹಣ-ಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಾಗಿರಿ, ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ. ಅವಿವಾಹಿತರಿಗೆ, ಕಂಕಣಭಾಗ್ಯ, ಆದಾಯದಲ್ಲಿ ಏರಿಕೆ, ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಸೋಮ- ಮಂಗಳ- ಗುರು- ಶುಭದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಅನಿರೀಕ್ಷಿತವಾಗಿ ಕುಟುಂಬದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳಲಿವೆ. ಎಲ್ಲವನ್ನೂ ಬಲ್ಲೆ ಎಂಬಂತೆ ವರ್ತಿಸುವುದರಿಂದ ಹೆಚ್ಚಿನ ನಷ್ಟ, ಆಂತರಿಕ ತಳಮಳ, ಬಂಧುಗಳಲ್ಲಿದ್ದ ಭಿನ್ನಾಬಿಪ್ರಾಯ ನಿಮ್ಮಿಂದಲೆ ಸರಿಹೋಗಲಿದೆ. ನಿರೀಕ್ಷಿತ ಸುವಾರ್ತೆಯಿಂದ ಜೀವನದಲ್ಲಿ ನವೋಲ್ಲಾಸ ಮೂಡಲಿದೆ. ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಜೋಪಾನವಾಗಿಡಿ. ಮತ್ತೊಬ್ಬರ ವ್ಯವಹಾರದಲ್ಲಿ ತಲೆ ಹಾಕಬೇಡಿ, ಮಡದಿ-ಮಕ್ಕಳ ಖರ್ಚು ವೆಚ್ಚಗಳು ಮಿತಿಮೀರಲಿವೆ. ಸಂಕಷ್ಟದಲ್ಲಿ ಸಿಲುಕಿರುವ ವ್ಯವಹಾರವು ಸರಿದಾರಿಗೆ ಬರಲು, ಅನುಭವಿಗಳಾದ ಹಿರಿಯರ ಸಲಹೆ- ಸೂಚನೆ ಪಡೆಯಿರಿ. ಬುಧ-ಗುರು-ಶುಕ್ರ- ಶುಭದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ಪತ್ರಿಕಾರಂಗದಲ್ಲಿರುವವರಿಗೆ ಸರ್ಕಾರದ ಸೌಲಭ್ಯಗಳು. ಆರ್ಥಿಕ ಮುಗ್ಗಟ್ಟಿದ್ದರೂ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಮಕ್ಕಳ ನಡಾವಳಿಯಲ್ಲಿ ಬದಲಾವಣೆಗಳು, ತಾಳ್ಮೆಯಿಂದ ವರ್ತಿಸಿ, ಸಮಸ್ಯೆಗಳು ಬಗೆಹರಿಸಿ, ಬಂಧುಗಳೊಂದಿಗೆ ಮಾತನಾಡುವಾಗ ತುಸು ವ್ಯತ್ಯಾಸವಾಗದಂತೆ ನೋಡಿಕೊಳ್ಳಿ. ಸಂಕಷ್ಟದ ನಡುವೆಯೂ, ವ್ಯಾಪಾರ-ವ್ಯವಹಾರಗಳು ತಕ್ಕಮಟ್ಟಿಗೆ ನಡೆಯಲಿವೆ. ರೈತಾಪಿ ಮಿತ್ರರು ಬಿಡುವಿಲ್ಲದ ಕೆಲಸ, ಅತಿಯಾದ ಭೋಜನ ಒಳ್ಳೆಯದಲ್ಲ, ವೈಯುಕ್ತಿಕ ವಿಚಾರಗಳನ್ನು ಪರಮಾಪ್ತರಲ್ಲಿ ಮಾತ್ರ ಹಂಚಿಕೊಳ್ಳಿ. ಮಹಿಳೆಯರು ಅಪರಿಚಿತರೊಂದಿಗೆ ಹಣ-ಕಾಸಿನ ವ್ಯವಹಾರ ಬೇಡ, ವಿದ್ಯಾರ್ಥಿಗಳಿಗೆ ಕಠಿಣ ಶ್ರಮವಿರಲಿ. ಭಾನು-ಬುಧ-ಗುರು- ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಹೊಸಯೋಜನೆಗಳಿಗೆಆರ್ಥಿಕವ್ಯವಸ್ಥೆಮಾಡಿಕೊಳ್ಳಿ,ಮಾರಾಟವಾಗದೇ ಸತಾಯಿಸುತ್ತಿದ್ದ ಆಸ್ತಿ ವಿಚಾರ ಈ ವಾರದಲ್ಲೇ ಇತ್ಯರ್ಥವಾಗಲಿದೆ. ನಿರುದ್ಯೋಗಿಗಳಿಗೆ ನೌಕರಿ ಸಿಗಲಿದೆ, ಹಿರಿಯರೊಂದಿಗೆ ವಾಗ್ವಾದ ಬೇಡ, ಸೋದರಿಗೆ ವಿವಾಹ ನಿಶ್ಚಯ, ಬ್ಯಾಂಕ್ ನೌಕರರಿಗೆ ಕರ್ತವ್ಯ ನಿರ್ವಹಿಸಲು ಮೇಲಾಧಕಾರಿಗಳಿಂದ ಅನೇಕ ಅಡಚಣೆಗಳು ಉಂಟಾಗಲಿದೆ. ಲೇವಾದೇವಿ ವ್ಯವಹಾರ ಅಷ್ಟು ಲಾಭ ದಾಯಕವಲ್ಲ. ಬೆಂಕಿ, ವಿದ್ಯುತ್ ಮೊದಲಾದ ಕಡೆ ಕೆಲಸಮಾಡುವವರು ಬಹಳ ಎಚ್ಚರ ದಿಂದಿರಿ, ಆದಾಯದ ಮೂಲದಲ್ಲಿ ತುಸು ಕೊರತೆ, ಗೆಳೆಯರೊಂದಿಗೆ ಸೌಹಾರ್ದತೆ ಕಾಪಾಡಿಕೊಳ್ಳಿ. ಮತ್ತೊಬ್ಬರ ವೈಯುಕ್ತಿಕ ವಿಚಾರದಲ್ಲಿ ಕುತೂಹಲ ಬೇಡ. ಸಾಧ್ಯವಾದಷ್ಟು ಗುರುಗಳ ಅನುಗ್ರಹ ಸಂಪಾದಿಸಿ, ಸೋಮ-ಬುಧ-ಶುಕ್ರ-ಶುಭದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನೀವಾಡುವ ನೇರ ಮಾತುಗಳು ಬೇರೆಯವರಿಗೆ ಮುಜುಗುರವನ್ನುಂಟು ಮಾಡಲಿದೆ. ಸಂಗೀತ ಕಲಾವಿದರಿಗೆ ಉತ್ತಮವೇದಿಕೆ, ಅನಿರೀಕ್ಷಿತ ಮೂಲದಿಂದ ಬರಲಿರುವ ಧನವನ್ನು ಜೋಪಾನವಾಗಿಡಿ, ಹರಿತವಾದ ಆಯುಧಗಳಿಂದ ಎಚ್ಚರವಾಗಿರಿ, ಆಸ್ತಿ ಖರೀದಿ ವಿಚಾರ ಸದ್ಯಕ್ಕೆ ಬೇಡ, ನಿಮ್ಮ ಎಲ್ಲಾ ಕೆಲಸಗಳಿಗೆ ಕುಟುಂಬದ ಸದಸ್ಯರಿಂದ ಸಹಕಾರ, ಮಿತ್ರರೊಂದಿಗಿರುವ ಭಿನ್ನಾಭಿಪ್ರಯ ಮುಕ್ತ ಮಾತುಕತೆಯಿಂದ ಬಗೆಹರಿಸಿಕೊಳ್ಳಿ. ಚಾಡಿಮಾತುಗಳನ್ನು ನಂಬಿ ಮನಸ್ಸಿನ ನೆಮ್ಮದಿ ಕೆಡಿಸಿಕೊಳ್ಳಬೇಡಿ. ಹಿರಿಯರ ಆರೋಗ್ಯದ ಬಗ್ಗೆ ಹೆಚ್ಚಿನ ಗಮನವಿಡಿ. ಸಾಕು ಪ್ರಾಣಿಗಳಿಂದ ಚಿಕ್ಕಮಕ್ಕಳಿಗೆ ಅಪಾಯವಾಗದಂತೆ ನೋಡಿಕೊಳ್ಳಿ. ಭಾನು-ಸೋಮ- ಮಂಗಳ-ಶುಬದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮಾಡುವ ಕೆಲಸಗಳಲ್ಲಿ ಏಕಾಗ್ರತೆ ಇರಲಿ, ಮತ್ತೊಬ್ಬರ ಬದುಕಿನ ಏರಿಳಿತಗಳ ಬಗ್ಗೆ ಯೋಚಿಸದೆ ಮುನ್ನಡೆಯುವುದನ್ನು ಕಲಿಯಿರಿ. ಬಾಕಿಯಿದ್ದ ಸರ್ಕಾರಿ ಕೆಲಸಗಳು ಪೂರ್ಣವಾಗಲಿದೆ. ಸರಕು ಸಾಗಾಣಿಕೆಗಳ ವಾಹನ ಮಾಲೀಕರಿಗೆ ವಹಿವಾಟು ಚೆನ್ನಾಗಿಯೇ ನಡೆಯಲಿದೆ. ಕುಟುಂಬದ ಸದಸ್ಯರ ಭಿನ್ನಾಭಿಪ್ರಾಯಗಳು ನೆಮ್ಮದಿ ಕೆಡಿಸಬಹುದು. ಮದುವೆ ಮಾತುಕತೆಯನ್ನು ಅನಾವಶ್ಯಕವಾಗಿ ಮುಂದೂಡು ವುದು ಒಳ್ಳೇಯದಲ್ಲ. ಹಿರಿಯರ ಸಲಹೆಗಳನ್ನು ಪಡೆಯಿರಿ, ಕೃಷಿ ಸಾಮಾಗ್ರಿಗಳು ಭರದಿಂದ ಮಾರಾಟವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಸ್ನೇಹಿತರ ಸಮಸ್ಯೆಗಳಿಗೆ ಸ್ಪಂದಿಸುವಿರಿ, ಹಳೇ ಖಾಯಿಲೆಗಳು ಮತ್ತೆ ಮರುಕಳಿಸುವ ಸಂಭವವಿದೆ. ಮಂಗಳ-ಬುಧ-ಗುರು-ಶುಭದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಉನ್ನತಾಧಿಕಾರಿಗಳಿಗೆ ಸಾರ್ವಜನಿಕರಿಂದ ಮೆಚ್ಚುಗೆ, ಆಡುವ ಮಾತಿನಲ್ಲಿ ಎಚ್ಚರವಿರಲಿ, ಸಹೋದ್ಯೋಗಿಗಳೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳಿ. ಸಂಶೋಧನಾ ರಂಗದಲ್ಲಿರುವವರಿಗೆ ಹೆಚ್ಚಿನ ಅನುದಾನ, ರಾಜಕಾರಣಿಗಳಿಗೆ ಹಿಂಬಾಲಕ ರಿಂದಲೇ ತೊಂದರೆ. ಹಿರಿಯರ ಸಲಹೆ ಪಡೆಯಿರಿ, ಅನಾವಶ್ಯಕ ಸಾಲಗಳು ಬೇಡ, ಸಂಬಂಧ ಪಡದ ಅನೇಕ ವಿಷಯಗಳು ನಿಮ್ಮ ಹೆಸರನ್ನು ಕೆಡಿಸಬಹುದು. ಇಂಥಹ ವಿಷಯಗಳ ಬಗ್ಗೆ ಜಾಗರೂಕರಾಗಿರಿ. ಆದಾಯ ಚೆನ್ನಾಗಿದ್ದರೂ, ಆರ್ಥಿಕ ಮುಗ್ಗಟ್ಟು ತಪ್ಪಿದ್ದಲ್ಲ. ಅನಾವಶ್ಯಕ ವಸ್ತುಗಳ ಖರೀದಿಬೇಡ, ಸಾಧ್ಯವಾದಷ್ಟು ಗುರು ಜಪ, ಗುರು ಚರಿತ್ರೆ ಪಾರಾಯಣ ಮಾಡಿ. ಭಾನು-ಬುಧ-ಶುಕ್ರ- ಶುಭದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಆರ್ಥಿಕ ಮುಗ್ಗಟ್ಟು, ಕೈಗಾರಿಕೋದ್ಯಮಿಗಳು ಮುನ್ನೆಚ್ಚರಿಕೆಯಿಂದಿರಬೇಕು. ಕೋಪ-ತಾಪಗಳಿಂದ ಏನನ್ನೂ ಸಾಧಿಸಲಾಗುವುದಿಲ್ಲ, ವಿದ್ಯಾರ್ಥಿಗಳು ಓದಿನ ಬಗ್ಗೆ ಗಮನವಿರಲಿ, ನಿರುದ್ಯೋಗಿಗಳಿಗೆ ಹತ್ತು ಹಲವು ಅವಕಾಶಗಳು ಬಂದರೂ ಉತ್ತಮ ಆಯ್ಕೆ ಮಾಡಿಕೊಳ್ಳುವುದು ಲೇಸು. ಪರಸ್ತ್ರೀಯರ ವಿಚಾರದಲ್ಲಿ ಆಸಕ್ತಿ ಬೇಡ. ಅತಿಯಾದ ಮನರಂಜನೆ ಆರೋಗ್ಯದ ಮೇಲೆ ಅಡ್ಡಪರಿಣಾಮ, ಮಡದಿಯ ಅಸಹನೆ ನಿಮ್ಮ ತಾಳ್ಮೆಯನ್ನು ಪರೀಕ್ಷಿಸಬಹುದು. ಮರುಬಳಿಕೆ ವಾಹನಗಳನ್ನು ಕೊಳ್ಳುವಾಗ ಎಚ್ಚರ ದಿಂದಿರಿ. ಆಸ್ತಿ ಖರೀದಿಗೆ ಇದು ಸಕಾಲವಲ್ಲ. ಸೋಮ-ಮಂಗಳ-ಗುರು-ಶುಭದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹೊಸಮನೆ ಕಟ್ಟುವ ವಿಚಾರದಲ್ಲಿ ಒಮ್ಮತದೊಂದಿಗೆ ನಿರ್ಣಯ ತೆಗೆದುಕೊಳ್ಳಿ, ಮನೆಯಲ್ಲಿ ನಡೆಯಬಹುದಾದ ಅನಿರೀಕ್ಷಿತ ಘಟನೆಗಳನ್ನು ಎದುರಿಸಲು ಮಾನಸಿಕವಾಗಿ ಸಿದ್ಧರಾಗಿರಿ, ವಿಪರೀತವಾಗಿ ಏರಿಳಿತವಾಗುತ್ತಿದ್ದ ಹಣ-ಕಾಸಿನ ಪರಿಸ್ಥಿತಿ ಕ್ರಮೇಣ ನಿಧಾನಗತಿಯಲ್ಲಿ ಚೇತರಿಸಲಿದೆ. ಆರೋಗ್ಯದ ಕಡೆ ಗಮನವಿರಲಿ, ಶುಭ ಕಾರ್ಯಗಳಲ್ಲಿ ಭಾಗವಹಿಸುವಿರಿ. ತುಸು ತಪ್ಪಿದರೂ, ವಿದ್ಯಾರ್ಥಿಗಳು ಉತ್ತಮ ಅವಕಾಶಗಳನ್ನು ಕಳೆದುಕೊಳ್ಳುವ ಸಂಭವವಿದೆ. ವಾಹನದಲ್ಲಿ ಎಚ್ಚರ, ಸೋದರನೊಂದಿಗೆ ಆಸ್ತಿವಿಭಾಗ ವಿಷಯವನ್ನು ಕೆಲಕಾಲ ಮುಂದೂಡುವುದು ಲೇಸು. ನೆರೆಹೊರೆಯವರೊಂದಿಗೆ ಸಾಮರಸ್ಯವಿರಲಿ, ಭಾನು-ಬುಧ-ಗುರು-ಶುಭದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಪ್ರೇಮಿಗಳು ಒಂದು ನಿರ್ಧಾರಕ್ಕೆ ಬರುವುದು ಉತ್ತಮ, ಸಾಲಗಳನ್ನು ತೀರಿಸಲು ಉತ್ತಮ ಮಾರ್ಗೋಪಾಯವಿದೆ, ಹಣಕಾಸಿನ ವಿಚಾರದಲ್ಲಿ ಮತ್ತೊಬ್ಬರೊಂದಿಗೆ ವ್ಯವಹರಿಸುವಾಗ ಎಚ್ಚರದಿಂದಿರಿ, ವ್ಯಾಪಾರಿಗಳಿಗೆ ತೆರಿಗೆ ಅಧಿಕಾರಿಗಳಿಂದ ಕಿರಿಕಿರಿ, ಮಕ್ಕಳು ನಿಮ್ಮೊಂದಿಗೆ ವಹಿವಾಟಿನಲ್ಲಿ ಸಹಕರಿಸುವುದರಿಂದ ಆರ್ಥಿಕ ಪರಿಸ್ಥಿತಿ ಸಾಕಷ್ಟು ಚೇತರಿಕೆ, ಮಂಗಳ ಕಾರ್ಯಗಳು ಸುಸೂತ್ರವಾಗಿ ನಡೆಯಲಿವೆ. ಹಿರಿಯರೊಂದಿಗಿದ್ದ ಮನಸ್ತಾಪವು ದೂರವಾಗಲಿದೆ. ಗೆಳೆಯರೊಂದಿಗೆ ವಿನಾಕಾರಣ ವಾಗ್ವಾದ ಬೇಡ. ಆಸ್ತಿ ಅಥವಾ ಹೊಸಮನೆ ಖರೀದಿ ವಿಚಾರವನ್ನು ಮುಂದೂಡಿ. ಹೈನುಗಾರಿಕೆಯಲ್ಲಿ ಸಾಕಷ್ಟು ಲಾಭ, ಹಣ್ಣು-ತರಕಾರಿ ಮಾರಾಟಗಾರರಿಗೆ ಹೆಚ್ಚಿನ ವಹಿವಾಟು. ಸೋಮ-ಶುಕ್ರ-ಶನಿ-ಶುಭದಿನಗಲು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹಿರಿಯರ ಅನುಭವಗಳನ್ನು ಕಡೆಗಾಣಿಸಬೇಡಿ, ಮನೆಯಲ್ಲಿ ನಿಂತುಹೋಗಿದ್ದ ಮಂಗಳ ಕಾರ್ಯವನ್ನು ಮತ್ತೆ ಮಾಡುವುದರಿಂದ ಶಾಂತಿ ನೆಮ್ಮದಿ, ವಿರೋಧಿಗಳೂ ನಿಮ್ಮ ಕಾರ್ಯವೈಖರಿ ಮೆಚ್ಚುವರು. ಪ್ರತಿಯೊಂದೂ ನಿಮ್ಮಂತೆಯೇ ನಡೆಯಬೇಕೆಂಬ ಧೋರಣೆಯನ್ನು ಬಿಡಿ, ವಿದ್ಯಾರ್ಥಿಗಳಿಗೆ ಬಂಧುಗಳಿಂದ ನೆರವು. ಮಡದಿ-ಮಕ್ಕಳ ಕೋರಿಕೆಗಳು ವಿಪರೀತವಾಗಲಿದ್ದು, ಅದು ನಿಮ್ಮ ಉಳಿತಾಯಕ್ಕೂ ಸಂಚಕಾರ ಬರಬಹುದು. ಆರ್ಥಿಕ ನೆರವು ಕೋರಿ ಬರಲಿರುವ ಸಂಬಂಧಿಗಳಿಗೆ ಕೈಲಾದಷ್ಟು ನೆರವಾಗುವಿರಿ. ಸಮಾಜ ಸೇವೆಯಲ್ಲಿ ಮಾನ-ಸನ್ಮಾನಗಳಾಗಲಿವೆ. ಅಪರೂಪಕ್ಕೆಂಬಂತೆ ಹಳೇ ಸಹಪಾಠಿಗಳ ಭೇಟಿ, ಬುಧ-ಶುಕ್ರ-ಶನಿ-ಶುಭದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮುಂದೂಡಲ್ಪಟ್ಟಿದ್ದ ಮಗಳ ಮದುವೆ ಮಾತುಕತೆ ಮತ್ತೆ ಮುನ್ನೆಲೆಗೆ ಬರಲಿದೆ. ಮತ್ತಾರದೋ ಕುತಂತ್ರದಿಂದ, ನಿಮ್ಮ ಜೀವನದಲ್ಲಿ ನಡೆದಿದ್ದ ಹಳೇ ಘಟನೆಯನ್ನು ಕೆದಕಿ, ಕುಟುಂಬದ ಸ್ವಾಸ್ಥ್ಯವನ್ನು ಕೆಡಿಸಲು ಪ್ರಯತ್ನಿಸಬಹುದು. ಆದಾಯ ಎಷ್ಟೇ ಉತ್ತಮವಾಗಿದ್ದರೂ, ಅನಿರೀಕ್ಷಿತ ವೆಚ್ಚಗಳು ಅನಿವಾರ್ಯವಾಗಬಹುದು. ಆಸ್ತಿಯಲ್ಲಿ ನಿಮ್ಮಪಾಲು ಕೈ ಸೇರಲಿದೆ. ಹೊಸವಾಹನ ಖರೀದಿ ಸದ್ಯಕ್ಕೆ ಬೇಡ. ರೈತಾಪಿ ಮಿತ್ರರಿಗೆ ಸರ್ಕಾರದಿಂದ ಸೌಲಭ್ಯಗಳು ಕೈ ಸೇರಲಿವೆ. ಹಣ-ಕಾಸಿನ ವಿಚಾರದಲ್ಲಿ ಮತ್ತೊಬ್ಬರಿಗೆ ಜಾಮೀನಾಗುವುದು ಬೇಡ, ಮಹಿಳೆಯರಿಗೆ ತವರುಮನೆಯಿಂದ ನೆರವು, ದೂರದ ಪ್ರಯಾಣವನ್ನು ಮುಂದೂಡುವುದು ಲೇಸು. ಸಾಧ್ಯವಾದಲ್ಲಿ ರದ್ದುಪಡಿಸುವುದು ಅತ್ಯುತ್ತಮ. ವಿದ್ಯಾರ್ಥಿಗಳಿಗೆ ದಿನಗಳು ಸಾಧಾರಣ. ಗುರು-ಶುಕ್ರ-ಶನಿ-ಶುಭದಿನಗಳು.

# ಶಿಕ್ಷಣ ಶಿಲ್ಪಿ ಎಂ.ಎಸ್.ಶಿವಣ್ಣ ಭೌತಿಕವಾಗಿ ಇನ್ನಿಲ್ಲವಾಗಿ ವರ್ಷ



ಸಿದ್ದಗಂಗಾ ಶಿವಣ್ಣ ಎಂದೇ ಹೆಸರಾಗಿದ್ದ ಎಂ.ಎಸ್.ಶಿವಣ್ಣ ಮೂಲಭೂತವಾಗಿ ವೃತ್ತಿಯಿಂದ ಒಳ್ಳೆಯ ಶಿಕ್ಷಕ. ಬಹುಶಃ ಅಷ್ಟೇ ಹೇಳಿ ಬಿಟ್ಟರೆ ಏನನ್ನೂ ಪೂರ್ಣವಾಗಿ ಹೇಳಿದಂತಾಗದು. ಶಿಕ್ಷಕನ ಜೊತೆಗೆ ಅವರೊಳಗೊಬ್ಬ ಕಲಾವಿದನಿದ್ದ, ಪತ್ರಕರ್ತನಿದ್ದ, ನಾಡು - ನುಡಿಗೆ ವ್ಯತ್ಯಯ ಬಂದಾಗ, ತೀವ್ರವಾಗಿ ಪ್ರತಿಭಟಿಸಿ ನಿಲ್ಲುವ ಹೋರಾಟಗಾರನಿದ್ದ. ಎಲ್ಲಕ್ಕೂ ಮಿಗಿಲಾಗಿ ದಮನಕ್ಕೀಡಾದವರ ನೋವಿಗೆ ಮಿಡಿದು ಕಂಬನಿ ಒರೆಸಿ ಸಾಂತ್ವನ ಹೇಳುವ, ಕೈ ಹಿಡಿದು ಮೇಲೆತ್ತಿ ಆಸರೆಯಾಗಿ ನಿಲ್ಲುವ ಮಾತೃ ಹೃದಯದ ಮಮತಾಮಯಿಯಿದ್ದ.

ಐವತ್ತು ವರ್ಷಗಳ ಹಿಂದೆ ಹೊಟ್ಟೆ ಪಾಡಿಗೆ ಕೆಲಸ ಹುಡುಕಿಕೊಂಡು ದಾವಣಗೆರೆಗೆ ದೂರದ ಬೆಂಗಳೂರಿನ ಮಾಗಡಿಯಿಂದ ಬಂದ ವಿದ್ಯಾವಂತ ಯುವಕ. ಶಿವಣ್ಣ ಮುಂದೊಂದು ದಿನ, ತನ್ನ ಸೇವೆ ಮೆಚ್ಚಿ ನಗರಾಡಳಿತ ತಾನಿದ್ದ ರಸ್ತೆಗೆ ತನ್ನ ಹೆಸರಿನ ನಾಮಕರಣವನ್ನೇ ಮಾಡುವ ಮೂಲಕ ಸ್ಮರಣೆ ಮಾಡುವ ಮಟ್ಟಿಗೆ ತಾನು ಬೆಳೆಯಬಹುದೆಂಬ ಕಲ್ಪನೆ ಇರಿಸಿ ಕೊಂಡಿರಲಾರರೆನಿಸಿದರೂ, ಸಿದ್ದಗಂಗೆಯ 'ನಡೆದಾಡುವ ದೇವರು' ಡಾ.ಶಿವಕುಮಾರ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದು, ಅವರ ಆಣತಿಯನ್ನು ತಲೆಯ ಮೇಲೆ ಹೊತ್ತು ಪಾಲಿಸುತ್ತಿದ್ದ ಶಿವಣ್ಣ ತಾನೂ ಅಂತಹುದೇನಾದರೂ ಸಾಧನೆ ಮಾಡಿಯೇ ತೀರಬೇಕೆಂಬ ಸಂಕಲ್ಪಧಾರಿ ಆಗಿದ್ದುದರಿಂದಲೇ ಮುಂದಿನ ಹಾದಿ ನಿಚ್ಚಳವಾಯಿತೆನ್ನಬಹುದು.

ಸಿದ್ದಗಂಗೆಯ ಶ್ರೀಗಳನ್ನು ನೆನೆಯುತ್ತಾ ದಾವಣಗೆರೆಯ ರೈಲು ನಿಲ್ದಾಣದಲ್ಲಿಳಿದ ಶಿವಣ್ಣ, ಕೆಲಸಕ್ಕಾಗಿ ಬೀದಿ ಬೀದಿ ತಿರುಗಿದರು. ಕೈಲಿದ್ದ ಪುಡಿಗಾಸೂ ಖರ್ಚಾದ ಮೇಲೆ ಹೊಟ್ಟೆ ಹಸಿದಾಗಲೆಲ್ಲಾ ರೈಲ್ವೆ ಸ್ಟೇಷನ್‌ನ ನಲ್ಲಿಯಲ್ಲಿ ಹೊಟ್ಟೆ ಭರ್ತಿ ನೀರು ಕುಡಿಯುವುದು, ರಾತ್ರಿ ಪ್ಲಾಟ್‌ಫಾರಂನಲ್ಲಿ ಮಲಗೋದು.....ಹೀಗೆ ದಿನವೆರಡು ಕಳೆದವು. ಹತಾಶನಾಗಿ ಬೀದಿ ತಿರುಗುತ್ತಿದ್ದ ಶಿವಣ್ಣರಿಗೆ ಮನೆಯೊಂದರ ಯಜಮಾನರು ವಿದ್ಯಾಭ್ಯಾಸದಲ್ಲಿ ಹಿಂದಾದ ತಮ್ಮ ಮಕ್ಕಳಿಗೆ ಗದರಿ ಬುದ್ದಿ ಹೇಳುತ್ತಿದ್ದುದು ಕೇಳಿ, ಅನುಮತಿಯಿತ್ತರೆ ತಾವು ಆ ಮಕ್ಕಳಿಗೆ ಮನೆ ಪಾಠ ಹೇಳಿ ಮುಂದಕ್ಕೆ ತರುವುದಾಗಿ ಮಾಡಿದ ಮನವಿ ಫಲ ಕೊಟ್ಟಿತ್ತು. ಅಂದು ಕೈಲಿ ಸೀಮೆಸುಣ್ಣ ಹಿಡಿದ ಶಿವಣ್ಣ ಹಿಂದಿರುಗಿ ನೋಡಲಿಲ್ಲ.

ಮನೆಪಾಠದಿಂದ ಕೋಚಿಂಗ್ ಕ್ಲಾಸ್ ಆಯ್ತು. ಮುಂದೆ ಜಯದೇವ ವೃತ್ತದ ಬಳಿಯ ಬಾಡಿಗೆ ಕಟ್ಟಡದಲ್ಲಿ ಶಾಲೆಯೂ ಶುರುವಾಯಿತು. ಶಾಲೆಗೆ ಶಿಕ್ಷಕಿಯಾಗಿ ಬಂದ ಜಸ್ಟಿನ್ ಡಿ'ಸೌಜ ಮುಂದಿನ ದಿನಗಳಲ್ಲಿ ಶಿವಣ್ಣನವರಿಗೆ ಜೊತೆ ಜೊತೆಯಾಗಿ ದುಡಿದು ಶಾಲೆಯನ್ನೂ ಬೆಳೆಸಿದರು. ಶಿವಣ್ಣನವರ ಬಾಳ ಸಂಗಾತಿಯಾಗಿ ಬದುಕನ್ನೂ ರೂಪಿಸಿದರು.

ಶಾಲೆಯ ಉಳಿವಿಗಾಗಿ ಶಿವಣ್ಣ ದಂಪತಿ ನಡೆಸಿದ ಹೋರಾಟವೇ ಒಂದು ಸುದೀರ್ಘ ಯಾನ. ಆನಂತರದ ಬಹು ಬೆಳವಣಿಗೆಗಳ ನಡುವೆ ಸಿದ್ದಗಂಗಾ ಈಗಿರುವ ಡಾಂಗೆ ಪಾರ್ಕ್ ಹಿಂಬದಿಯ ವಿಶಾಲವಾದ ಪ್ರದೇಶಕ್ಕೆ ಸ್ಥಳಾಂತರಗೊಂಡಿತು. ಶಿವಣ್ಣ ದಂಪತಿ ಮಕ್ಕಳ ದಶಕಗಳ ಪರಿಶ್ರಮದ ಫಲವಾಗಿ ಮಧ್ಯ ಕರ್ನಾಟಕವೇ ಮೆಚ್ಚುವಂತಹ ಅಭೂತಪೂರ್ವ ವಿದ್ಯಾಸಂಸ್ಥೆಯಾಗಿ ತಲೆ ಎತ್ತಿ ನಿಂತಿತು.

ಸಮಾಜದಲ್ಲಿ ಅಮಾಯಕರ ಮೇಲೆ ಬಲಾಢ್ಯರು ನಡೆಸುತ್ತಿದ್ದ ಅನ್ಯಾಯ - ಅಕ್ರಮಗಳನ್ನು ಕಂಡು ರೋಸಿ ಹೋಗಿದ್ದ ಶಿವಣ್ಣನವರು ಎಂಬತ್ತರ ದಶಕದಲ್ಲಿ 'ಕರ್ನಾಟಕ ನಾಗರಿಕ ದೌರ್ಜನ್ಯ ವಿರೋಧಿ ಸಮಿತಿ' ರಚಿಸಿ, ಅನ್ಯಾಯಕಾರರ ವಿರುದ್ಧ ಕಾನೂನು ಸಮರ ಮತ್ತು ಬೀದಿಗಿಳಿಯುವ ಮೂಲಕ ಹೋರಾಟ ಆರಂಭಿಸಿದರು. ದೌರ್ಜನ್ಯಕ್ಕೀಡಾದವರಿಗೆ ತಮ್ಮ ಮನೆಯಲ್ಲಿಯೇ ಅನ್ನಾಸರೆಯಿತ್ತು ರಕ್ಷಣೆ ನೀಡಿದರು. ಇದಕ್ಕನುಕೂಲವಾಗುವಂತೆ ಪತ್ರಿಕೆಗಳನ್ನೂ ಆರಂಭಿಸಿದರು. ಸ್ವತಃ ರಂಗ ಕಲಾವಿದರಾಗಿದ್ದ ಶಿವಣ್ಣ, ಕಲಾ ಪೋಷಕರಾಗಿ ತಮ್ಮ ಶಾಲೆಯ ಆವರಣವನ್ನೇ ಅನುವು ಮಾಡಿಕೊಟ್ಟರು.

ನಾಡು - ನುಡಿಯ ಅಪ್ರತಿಮ ಅಭಿಮಾನಿಯಾಗಿದ್ದ ಶಿವಣ್ಣ, ಭಾಷಾ ಹೋರಾಟದಲ್ಲಿ ವಹಿಸಿದ ಪಾತ್ರ ಅಮೂಲ್ಯ. ತನು, ಮನ, ಧನಗಳ ಮೂಲಕ ನೆರವಿಗೆ ಧಾವಿಸುತ್ತಿದ್ದ ಶಿವಣ್ಣನವರ ಕೈಲಿ ಆಸ್ತಿಯ ಮೂಲ ಪ್ರಮಾಣ ಪತ್ರ ಹಾಗೂ ಜೇಬಲ್ಲಿ ನೋಟಿನ ಕಿರು ಪೆಂಡಿ ಸದಾ ಸಿದ್ದವಾಗಿರುತ್ತಿತ್ತು. ಕೋರ್ಟ್‌ನಲ್ಲಿ ಕನ್ನಡ ಪರ ಹೋರಾಟಗಾರರಿಗೆ ಜಾಮೀನು ನೀಡಲು ಆಸ್ತಿ ಪತ್ರ ಹಾಗೂ ಅವರುಗಳ ಊಟೋಪಚಾರಗಳಿಗೆಂದು ಪುಡಿಕೆ ಹಣ!.

ಶಿವಣ್ಣ ಸ್ವಲ್ಪ ಮುಂಗೋಪಿ, ಮೂಡಿ ಎಂದೆಲ್ಲಾ ಹೇಳುವವರಿದ್ದಾರೆ. ಅದಕ್ಕೂ ಮಿಗಿಲಾಗಿ ಅವರೊಬ್ಬ ಸ್ನೇಹಮಯಿ, ಮನೆಗೆ ಬಂದವರಿಗೆ ಆತಿಥ್ಯ ನೀಡುವುದನ್ನು ವ್ರತದಂತೆ ಪಾಲಿಸುತ್ತಿದ್ದ (ಅದು ಅವರಿಗೆ ಸಿದ್ದಗಂಗಾ ಮಠದಲ್ಲಿಯೇ ಮನಗಾಣಿಸಲಾಗಿತ್ತು !) ಶಿವಣ್ಣನವರ ಮನೆಯಲ್ಲಿ ಊಟೋಪಚಾರ ಪಡೆಯದವರು ವಿರಳಾತಿ ವಿರಳ. ಸಮಯ ಯಾವುದೇ ಇರಲಿ, ನಾ ಹೋದಾಗಲೆಲ್ಲಾ ಪರಮಾಪ್ತತೆಯಿಂದ ಸ್ವಾಗತಿಸುತ್ತಿದ್ದ ಶಿವಣ್ಣ 'ಮೇಡಮ್ಮಾ, ಪ್ರಸಾದ್ ಬಂದಿದ್ದಾರೆ...' ಎಂದಷ್ಟೇ ಹೇಳಿ ನನ್ನೊಂದಿಗೆ ನಿರರ್ಗಳ ಮಾತುಕತೆ ಆರಂಭಿಸುತ್ತಿದ್ದಂತೆ, ಮಾಡುತ್ತಿದ್ದ ಕೆಲಸವನ್ನ ಅತ್ತತಳ್ಳಿ, ದೊಡ್ಡದಾದ ಲೋಟಗಳಲ್ಲಿ ಕಾಫಿಯೊಂದಿಗೆ ಮಂದಸ್ಮಿತ ಡಿ'ಸೌಜ ಮೇಡಂ ಬರುತ್ತಿದ್ದುದು ಕಣ್ಣಿಗೆ ಕಟ್ಟಿದಂತಿದೆ. ಪ್ರತಿ ವರ್ಷ ಶಾಲೆಯಲ್ಲಿ ನಡೆಸುತ್ತಿದ್ದ ಎಡೆಯೂರು ಸಿದ್ಧಲಿಂಗೇಶ್ವರ ಜಾತ್ರಾ ಪ್ರಯುಕ್ತ ಹಾಕುತ್ತಿದ್ದ ರುಚಿಕರ ಹೋಳಿಗೆ ಊಟ (ಅದನ್ನವರು ವಿನಮ್ರರಾಗಿ ಸಿದ್ದಲಿಂಗನ ಪ್ರಸಾದ ಎನ್ನುತ್ತಿದ್ದರು) ದ ಸವಿ ಸವಿಯದವರಾರು?

ಹೀಗೆ ನಾಲ್ಕೂವರೆ ದಶಕಕ್ಕೂ ಮಿಕ್ಕಿ ನಮ್ಮಗಳಿಗೆ ಮಾದರಿಯಾಗಿದ್ದ, ಅಭಿಮಾನಿಗಳೆಲ್ಲರಿಗೂ 'ಮೇಸ್ಟ್ರು' ಆಗಿದ್ದ ಶಿವಣ್ಣನವರು ನಮ್ಮಗಳ ಮನದಲ್ಲಿ ಸದಾ ಅಜರಾಮರರಾಗಿರುತ್ತಾರೆ. ಅವರು ಹಾಕಿ ಕೊಟ್ಟ ಹಾದಿಯಲ್ಲೇ ಮುಂದುವರೆಯುತ್ತಿರುವ ಜಸ್ಟಿನ್ ಡಿ'ಸೌಜ ಮೇಡಂ ಮತ್ತು ಕುಟುಂಬ ವರ್ಗದವರು ಶಿವಣ್ಣನವರ ಪರಂಪರೆಯನ್ನು ನಿರಾತಂಕವಾಗಿ ಮುಂದುವರೆಸುವ ಭರವಸೆ ಅಭಿಮಾನಿಗಳದು.

**- ಹಳೇಬೀಡು ರಾಮ ಪ್ರಸಾದ್**

# ನಿಗದಿತ ಸ್ಥಳದಲ್ಲೇ ಅಂಬೇಡ್ಕರ್ ಭವನ ನಿರ್ಮಿಸಿ

ದಾವಣಗೆರೆ, 17 - ನಿಗದಿಪಡಿಸಿದ ಸ್ಥಳದಲ್ಲಿ ಅಂಬೇಡ್ಕರ್ ಭವನ ನಿರ್ಮಿಸದಿದ್ದರೆ ಸಂಸದರ ಜನ ಸಂಪರ್ಕ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸುವುದಾಗಿ ಕರ್ನಾಟಕ ರಾಜ್ಯ ಆದಿಜಾಂಬವ ಸಂಘದ ನಗರ ಘಟಕದ ಅಧ್ಯಕ್ಷ ಟಿ.ರಮೇಶ್ ಎಚ್ಚರಿಕೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು ಇತ್ತೀಚಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಅಂಬೇಡ್ಕರ್ ಭವನದ ಶಂಕು ಸ್ಥಾಪನೆಯ ಪೂರ್ವಭಾವಿ ಸಭೆಯಲ್ಲಿ ಪಿ.ಬಿ. ರಸ್ತೆಯ ತೋಟಗಾರಿಕೆ ಇಲಾಖೆ ಡಿಸಿ ಕಛೇರಿಗೆ ಸ್ಥಳಾಂತರಗೊಳ್ಳಲಿದ್ದು, ಆ ಜಾಗದಲ್ಲಾಗಲೀ, ಅಗ್ನಿ ಶಾಮಕ ದಳದ ಕಚೇರಿ ಪಕ್ಕದಲ್ಲಾಗಲೀ ಅಥವಾ ಲೋಕಿಕೆರೆ ರಸ್ತೆ (ಬೈಪಾಸ್) ಸರ್ಕ್ಯೂಟ್ ಹೌಸ್ ಸಮೀಪ ಇರುವ 120x100 ಅಡಿ ಜಾಗದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಅಂಬೇಡ್ಕರ್ ಜಯಂತಿ ಆಚರಣೆ ದಿನ ದಂದು ಸಂಸದರು ಕೊಂಡಜ್ಜಿ ರಸ್ತೆಯಲ್ಲಿರುವ ಆರ್‌ಟಿಓ ಕಛೇರಿ ಮುಂಭಾಗದ ದೂಡಾ ಜಾಗದಲ್ಲಿ ಶಂಕು ಸ್ಥಾಪನೆ ಮಾಡಲಿ ಎಂದಿದ್ದಾರೆ. ಆದರೆ ಇದಕ್ಕೆ ದಲಿತ ಮುಖಂಡರ ಆಕ್ಷೇಪವಿದೆ.

ಕಾರಣ ಹತ್ತಿರದಲ್ಲೇ (ಎಸ್.ಎಂ. ಕೃಷ್ಣ ನಗರದಲ್ಲಿ) ನಿರ್ಮಿಸಿರುವ ಬಾಬು ಜಗಜೀವನರಾಂ ಸಮುದಾಯ ಭವನ ಸರಿಯಾದ ನಿರ್ವಹಣೆ ಇಲ್ಲದೆ ಹಾಳಾಗಿದೆ, ಅವೈಜ್ಞಾನಿಕ ಕಟ್ಟಡ ನಿರ್ಮಾಣವಾಗಿದೆ. ಆದ್ದರಿಂದ ಆ ರೀತಿಯಾಗದಂತೆ ಮೊದಲೇ ನಿಗದಿ ಪಡಿಸಿದ ಜಾಗದಲ್ಲೇ ಅಂಬೇಡ್ಕರ್ ಭವನ ನಿರ್ಮಾಣವಾಗಲಿ ಎಂದು ಒತ್ತಾಯಿಸಿದರು.

ಲೋಕಿಕೆರೆ ರಸ್ತೆಯ ಸರ್ಕ್ಯೂಟ್ ಹೌಸ್ ಬಳಿ ಅಂಬೇಡ್ಕರ್ ಭವನ ನಿರ್ಮಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಆದಿ ಜಾಂಬವ ಸಂಘದ ನಗರ ಘಟಕದ ಪದಾಧಿಕಾರಿಗಳಾದ ಡಿ. ಮಲ್ಲಿಕಾರ್ಜುನ, ಬಸವರಾಜ್, ಬಿ.ನಿಂಗಪ್ಪ, ವಿ.ನಾಗರಾಜ್, ಬಿ.ಇ. ಪವನ್, ರಾಜು, ಪ್ರಜ್ವಲ್, ಡಿ. ಲಿಂಗರಾಜ್, ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು.

## ರಾಜ್ಯದಲ್ಲಿ 17 ಸಾವಿರಕ್ಕೂ ಹೆಚ್ಚು ಕೊರೊನಾ

ಬೆಂಗಳೂರು, ಏ 17 – ಕರ್ನಾಟಕದಲ್ಲಿ ಶನಿವಾರ 17,489 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 80 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ.

ಬೆಂಗಳೂರು ನಗರ ಒಂದರಲ್ಲೇ 11,404 ಸೋಂಕಿತರು ಕಂಡು ಬಂದಿದ್ದಾರೆ ಹಾಗೂ ನಗರದಲ್ಲಿ 43 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಇದೇ ದಿನ 5,565 ಸೋಂಕಿ ತರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ರಾಜ್ಯ ದಲ್ಲಿ 1.19 ಲಕ್ಷ ಸಕ್ರಿಯ ಸೋಂ ಕಿತರಿದ್ದು, ಇವರಲ್ಲಿ 5889 ಜನ ಐ.ಸಿ.ಯು.ನಲ್ಲಿದ್ದಾರೆ.


## ಮೋದಿ ತುರ್ತು ಸಂದರ್ಭದಲ್ಲಿ ನಿಷ್ಕ್ರಿಯ

ನವದೆಹಲಿ, ಏ. 17 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಕೊರೊನಾ ಪರಿಸ್ಥಿತಿ ನಿರ್ವಹಿಸುತ್ತಿರುವ ರೀತಿಯನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ತುರ್ತು ಪರಿಸ್ಥಿತಿಯಲ್ಲಿ ನಿರ್ಗಮನದ ಬಟನ್ ಒತ್ತುವ ರೀತಿಯಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ ಎಂದಿದ್ದಾರೆ.

ದೇಶದಲ್ಲಿ ಕೊರೊನಾ ಪರಿಸ್ಥಿತಿ ಉಲ್ಬಣಿಸುತ್ತಿದೆ. ಲಸಿಕೆ ರಫ್ತು ಮಾಡುತ್ತಿದ್ದ ದೇಶ ಈಗ ಆಮದು ಸ್ಥಿತಿಗೆ ಬಂದಿದೆ. ಕಳೆದ 70 ವರ್ಷಗಳಲ್ಲಿ ಮಾಡಿದ ಸಾಧನೆ ಮಣ್ಣು ಪಾಲಾಗಿದೆ ಎಂದಿದ್ದಾರೆ.

## ಪದವಾಣಿ-28

- ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**

| | |
|---|---|
| 1) ಸೂರ್ಯನ ಬೆಳಕಿನಂತವನು | 3 |
| 4) ಅನುಕೂಲವಿರುವ ಇವಳು ಕೊನೆಗೆ ಲಕ್ಷ್ಮಿಯನ್ನು ಹೊಂದಿದ್ದಾಳೆ | 3 |
| 6) ಇವಳು ರಾತ್ರಿ ರಾಣಿ | 3 |
| 7) ಪರಿಶುದ್ಧನಾದವನು ಕೊನೆಗೆ ಅರ್ಧಾಕ್ಷರ ಪಡೆದಿದ್ದಾನೆ | 3 |
| 9) ಕಾವ್ಯ ರಚಿಸುವವಳು ತಿರುಗಿದ್ದಾಳೆ | 3 |
| 11) ಬಿಳಿಯ ಬಣ್ಣದ ಪಕ್ಷಿಯಂತವನು | 3 |
| 12) ಸಂಪೂರ್ಣವಾಗಿ ತಲ್ಲೀನನಾದವನು ಕೊನೆಯಲ್ಲಿ ಅರ್ಧಾಕ್ಷರ ಪಡೆದಿದ್ದಾನೆ. | 3 |
| 13) ಕತ್ತರಿಸುವ, ಪ್ರವಹಿಸುವ ಇವನು ವಿಷ್ಣುವೇ? | 2 |
| 14) ಆನಂದವನ್ನುಂಟು ಮಾಡುವವಳು ಕೊನೆಗೆ ದೀರ್ಘಹೊಂದಿ ತಿರುಗಿದ್ದಾಳೆ. | 3 |
| 16) ಸುಂದರವಾದ ಗೆರೆ ಹೊಂದಿದ ಚೆಲುವೆ ಅಸ್ತವ್ಯಸ್ತವಾಗಿದ್ದಾಳೆ | 3 |
| 18) ದೀಕ್ಷೆಯನ್ನು ಹೊಂದಿದವನು | 3 |
| 19) ಶರೀರದಿಂದ ಬಂದ ಸುತನಿವನು | 3 |
| 20) ಸಿರಿ ಸಂಪತ್ತನ್ನು ಕೊನೆಗೆರಿಸಿಕೊಂಡು ಇಬ್ಬನಿಯಂತವಳು | 3 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಅಭಿವೃದ್ಧಿ ಹೊಂದಿದ ಈತನಿಗೆ ಕೊನೆಯಲ್ಲಿ ಕೊಂಬು ಮುಡಿದೆ | 3 |
| 2) ಬಾಣದಿಂದ ಬಂದವನು ಕೊನೆಯಲ್ಲಿ ಅರ್ಧಾಕ್ಷರ ಪಡೆದಿದ್ದಾರೆ | 3 |
| 3) ಪ್ರೀತಿಸಿದವಳು ಇವಳು | 3 |
| 4) ದುಃಖರಹಿತನಾದ ಇವನು ಮೌರ್ಯವಂಶದ ರಾಜ | 3 |
| 5) ಲಕ್ಷ್ಮಿಗೆ ಆವಾಸಸ್ಥಾನನಾದವನು | 4 |
| 8) ನೀಲಿ ಬಣ್ಣದಿಂದ ಬಂದ ಇವಳಿಗೆ ರಾಗ ಒಂದು ಗೊತ್ತಿದೆ | 4 |
| 10) ಒಳ್ಳೆಯ ತನದವನು ಕೊನೆಯಲ್ಲಿ ಅರ್ಧಾಕ್ಷರ ಹೊಂದಿದ್ದಾನ. | 3 |
| 11) ಬಿಳಿಯ ಬಣ್ಣದ ಪಕ್ಷಿಯಂತವನು ಸಂಗೀತ ಸಾಮ್ರಾಟ್ | 4 |
| 12) ದಿಕ್ಕಿನ ತುದಿಯಲ್ಲಿರುವ ಇವನು ತಲೆಕೆಳಗಾಗಿದ್ದಾನೆ | 3 |
| 13) ಇವನು ಆಂಜನೇಯ | 4 |
| 14) ನೀರಲ್ಲಿ ಹುಟ್ಟಿದ ಕಮಲದಂತವಳು | 3 |
| 15) ಬಸವನಿಂದ ಬಂದ ಈಶನಿವನು | 3 |
| 16) ಅಂತ ಅಂತವಾಗಿ ಹೂವಿನಿಂದ ಬಂದವನು ಅಸ್ತವ್ಯಸ್ತನಾಗಿದ್ದಾರೆ | 3 |
| 17) ಹಾಕಿಕೊಂಡು ಬಂದ ಇವಳು ಲಕ್ಷ್ಮೀ ಪುತ್ರಳು | 3 |


(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 27ರ ಉತ್ತರಗಳು :**

**ಎಡದಿಂದ ಬಲಕ್ಕೆ :** 1) ಭೈರವಿ 4) ಅಂಜನ 6) ಜನಜನಿತ 7) ವಲಯ 9) ಕುಂತಿ 10) ಗಮಕ 13) ಮಲಗು 15) ಅಕ್ಕ 16) ಹರಕೆ 18) ಗುಲಾಮಗಿರಿ 19) ಗರಡಿ 20) ತವರು.

**ಮೇಲಿನಿಂದ ಕೆಳಕ್ಕೆ :** 1) ಭೈರವ 2) ವಿಜಯ 3) ಗಜಪತಿ 4) ಅಂತರಂಗ 5) ನಕ್ಷತ್ರಿಕ 8) ಲಗ್ನಕಾಲ 9) ಕುಂಭ 11) ಮತದಾರ 12) ರೊಕ್ಕ 13) ಮನೋರೋಗ 14) ಗುಡಿಗುಡಿ 15) ಅನುಮತಿ 16) ಹರಿತ 17) ಕೆಸರು.


# ಜಿಲ್ಲಾ ಜಾತ್ಯತೀತ ಜನತಾದಳ ಪರಿಶಿಷ್ಟ ವಿಭಾಗದಿಂದ ಅಂಬೇಡ್ಕರ್ ಜಯಂತಿ



ದಾವಣಗೆರೆ, ಏ. 17 - ಜಿಲ್ಲಾ ಜಾತ್ಯತೀತ ಜನತಾ ದಳದ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಬಾಬು ಜಗಜೀವನ್‌ರಾಂ ಜಯಂತಿ ಆಚರಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಎಸ್ಸಿ ಘಟಕದ ಅಧ್ಯಕ್ಷ ಸಿ. ಅಂಜಿನಪ್ಪ ಕಡತಿ ಅಂಬೇಡ್ಕರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು. ಸಭೆಯಲ್ಲಿ ಜಿಲ್ಲಾ ಜಾತ್ಯತೀತ ಜನತಾದಳದ ಉಪಾಧ್ಯಕ್ಷ ಗೋವಿಂದಪ್ಪ, ಮಂಜುನಾಥ, ಶಿವಯೋಗಿ, ಜಬೀವುಲ್ಲಾ, ಎಸ್.ಬಿ.ಚಂದ್ರಶೇಖರಪ್ಪ, ಅಣ್ಣಪ್ಪ, ಎನ್. ಆಂಜನೇಯ, ಕೆ.ಎ.ಪೂರ್ಣಾನಂದ, ತನ್ವೀರ್, ಅಭಿರಾಮ್, ಶ್ರೀಮತಿ ನಾಗಮ್ಮ ಶ್ರೀಮತಿ ಶಾಂತಮ್ಮ, ಶ್ರೀಮತಿ ರೇಣುಕಾ ಇನ್ನಿತರರು ಭಾಗವಹಿಸಿದ್ದರು.

# ದೇವರಬೆಳಕೆರೆಯಲ್ಲಿ 'ಆರೋಗ್ಯ, ಕ್ಷೇಮ ದಿನ' ಆಚರಣೆ



ಮಲೇಬೆನ್ನೂರು, ಏ.17- ದೇವರಬೆಳಕೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಮತ್ತು ಕ್ಷೇಮ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 130ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಸಿಗುವ 12 ಪ್ರಾಥಮಿಕ ಆರೋಗ್ಯ ಸೇವೆಗಳ ಬಗ್ಗೆ ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ ಮಾಹಿತಿ ನೀಡಿದರು. ವೈದ್ಯಾಧಿಕಾರಿಗಳಾದ ಡಾ. ವಿಶ್ವನಾಥ್ ಮತ್ತು ಡಾ. ದರ್ಶನ್ ಅವರ ಆರೋಗ್ಯ ಮತ್ತು ಕ್ಷೇಮ ದಿನ ಆಚರಣೆಯ ಉದ್ದೇಶಗಳನ್ನು ತಿಳಿಸಿ, ಆರೋಗ್ಯದ ಬಗ್ಗೆ ಎಲ್ಲರೂ ನಿಗಾವಹಿಸುವಂತೆ ಮನವಿ ಮಾಡಿದರು.

ಗ್ರಾ.ಪಂ. ಅಧ್ಯಕ್ಷೆ ಗೀತಮ್ಮ ಪರಸಪ್ಪ, ಉಪಾಧ್ಯಕ್ಷೆ ಮಹೇಶ್ವರಮ್ಮ ವಾಗೀಶ್, ಪಿಡಿಓ ಶಿವಪ್ಪ ಬಿರಾದಾರ್, ಆರೋಗ್ಯ ಮೇಲ್ವಿಚಾರಕಿ ಸುಧಾ ಸೇರಿದಂತೆ ಗ್ರಾ.ಪಂ. ಸದಸ್ಯರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಎಲೆಬೇತೂರು ರಥೋತ್ಸವ ರದ್ದು

ದಾವಣಗೆರೆ, ಏ. 17 - ಎಲೆಬೇತೂರು ಗ್ರಾಮದ ಶ್ರೀ ಸವಗದ್ದುಗೆ ಸಂಗಮೇಶ್ವರ ಮಹಾಸ್ವಾಮಿಯ ರಥೋತ್ಸವವು ಇದೇ ದಿನಾಂಕ 22 ರಂದು ನಡೆಯಬೇಕಿದ್ದು, ದಿನೇ ದಿನೇ ಕೊರೊನಾ ಸೋಂಕು ಹೆಚ್ಚುತ್ತಿದ್ದು, ಸರ್ಕಾರದ ಮಾರ್ಗಸೂಚಿಯನ್ವಯ ರಥೋತ್ಸವವನ್ನು ರದ್ದುಪಡಿಸಲಾಗಿದೆ.

# ಭದ್ರಾ ನಾಲೆ ನೀರು ವಿಭಜಿಸುವ ರೆಗ್ಯುಲೇಟರಿ-2 ಕೇಂದ್ರಕ್ಕೆ ಕಾಡಾ ಅಧ್ಯಕ್ಷರ ಭೇಟಿ, ಪರಿಶೀಲನೆ

ದಾವಣಗೆರೆ ಏ.17 - ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆ ಪವಿತ್ರ ರಾಮಯ್ಯ ಅವರು ಚನ್ನಗಿರಿ ತಾಲ್ಲೂಕು ಸೇವಾ ನಗರ ಗ್ರಾಮದಲ್ಲಿರುವ ರೆಗ್ಯುಲೇಟರಿ-2 ನಾಲೆ ನಿರ್ವಹಣಾ ಕೇಂದ್ರಕ್ಕೆ ಇಲಾಖೆಯ ಅಧಿಕಾರಿಗಳೊಂದಿಗೆ ಭೇಟಿ ನೀಡಿದರು.



ನಾಲ್ಕು ತಿಂಗಳು ಹಗಲು-ರಾತ್ರಿ, ಬಿಸಿಲು-ಮಳೆ ಲೆಕ್ಕಿಸದೆ ಬೆವರು ಹರಿಸಿ ನಾಟಿ ಮಾಡಿದ ಭತ್ತ, ರಾಗಿ ಇನ್ನು ಮುಂತಾದ ಬೆಳೆಗಳನ್ನು ಕಟಾವು ಮಾಡುವ ಸಮಯ ಹತ್ತಿರದಲ್ಲಿದ್ದು, ಈ ಸಮಯದಲ್ಲಿ ನೀರಿನ ಅವಶ್ಯಕತೆ ಬಹಳಷ್ಟು ಇರುತ್ತದೆ. ಇನ್ನು ಕೆಲವೇ ದಿನಗಳಲ್ಲಿ ಅಚ್ಚುಕಟ್ಟು ಭಾಗದ ಅನ್ನದಾತರು ಉತ್ತಮ ಫಸಲು ಪಡೆಯುವ ಮೂಲಕ ನಾಡಿಗೆ ಉಣಬಡಿಸಲಿದ್ದಾರೆ.

ಮೇಲಾಗಿ ಉತ್ತಮ ಬೆಳೆ ಪಡೆಯಬೇಕು, ಆರ್ಥಿಕವಾಗಿ ಸಬಲರಾಗಬೇಕು ಎಂಬ ಅಪಾರ ಹಂಬಲದೊಂದಿಗೆ ವಿವಿಧೆಡೆ ಸಾಲ ಮಾಡಿ ಬೀಜ, ಗೊಬ್ಬರ ತಂದು ನಾಟಿ ಮಾಡಿದ್ದಾರೆ. ಇಂತಹ ರೈತಾಪಿ ವರ್ಗದವರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗಬಾರದು ಎಂದು ಭದ್ರಾ ಕಾಡಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ದಿನವೇ ನಾನು ತೀರ್ಮಾನ ಮಾಡಿದ್ದೇನೆ, ಅವರಿಗೆ ನೀರು ಸರಿಯಾದ ಪ್ರಮಾಣದಲ್ಲಿ ತಲುಪಿಲ್ಲ ಎಂದು ಒಂದೇ ಒಂದು ಕರೆ ಬಂದರೆ ರಾತ್ರಿ ನಿದ್ದೆ ಮಾಡುವುದಿಲ್ಲ ಎಂದು ತಮ್ಮ ಮನದಾಳದ ಮಾತನ್ನು ವ್ಯಕ್ತಪಡಿಸಿದರು.

ನೀರಿನ ಗೇಜ್ ಪ್ರತಿ ಬಾರಿ ಸುಮಾರು 13.2 ಅಡಿ ಇದ್ದರೆ ಮಾತ್ರ ಅಚ್ಚುಕಟ್ಟಿನ ಕೊನೆಯ ಭಾಗಗಳಿಗೆ ಸರಾಗವಾಗಿ ನೀರು ತಲುಪುತ್ತದೆ. ಆದರೆ ನೀರಿನ ಏರಿಳಿತದಿಂದ ಕಳೆದ ಎರಡು ದಿನಗಳಿಂದ ದಾವಣಗೆರೆ ಹಾಗೂ ಮಲೇಬೆನ್ನೂರು ಅಚ್ಚುಕಟ್ಟು ವ್ಯಾಪ್ತಿಯ ಕೊನೆಯ ಗ್ರಾಮಗಳಿಗೆ ನೀರಿನ ನಿರ್ವಹಣೆಯಲ್ಲಿ ಕೊಂಚ ಮಟ್ಟಿನ ಏರಿಕೆಯಾಗಿ ತೊಂದರೆಯಾಗಿತ್ತು. ತಕ್ಷಣವೇ ಅಧಿಕಾರಿಗಳೊಂದಿಗೆ ದಾವಣಗೆರೆ ಹಾಗೂ ಮಲೇಬೆನ್ನೂರು ಭಾಗಗಳಿಗೆ ನಾಲೆಯ ಮೂಲಕ ಜಲಾಶಯದ ನೀರು ವಿಭಜಿಸುವ ರೆಗ್ಯುಲೇಟರಿ-2 ಕೇಂದ್ರಕ್ಕೆ ಭೇಟಿ ನೀಡಿ ಸದರಿ ಗೇಜ್ ಪರಿಶೀಲಿಸಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ರೈತರಿಗೆ ನಾನು ಅಧಿಕಾರದಲ್ಲಿ ಇರುವವರೆಗೂ ಯಾವುದೇ ರೀತಿಯಲ್ಲಿ ತೊಂದರೆಯಾಗಲು ಅವಕಾಶ ಮಾಡಿಕೊಡುವುದಿಲ್ಲ, ಅಧಿಕಾರಿಗಳು ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಬೇಕು. ಮತ್ತೆಂದೂ ಗೇಜ್ ವ್ಯತ್ಯಾಸವಾಗದಂತೆ ನೋಡಿಕೊಳ್ಳಿ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಡಿ.ಬಿ.ಹಳ್ಳಿ ಸಹಾಯಕ ಕಾರ್ಯಪಾಲಕ ಅಭಿಯಂತರ ಪ್ರಸನ್ನ, ದಾವಣಗೆರೆ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ರುದ್ರೇಶ್ ನಾಯ್ಕ್, ಕಿರಿಯ ಸಹಾಯಕ ಅಭಿಯಂತರರು ಉಪಸ್ಥಿತರಿದ್ದರು.

# ಕೊರೊನಾ ನಿಯಮ ಉಲ್ಲಂಘಿಸಿದರೆ ಕ್ರಿಮಿನಲ್ ಕೇಸ್ : ಸಚಿವ ಬೊಮ್ಮಾಯಿ ಆದೇಶ

ಬೆಂಗಳೂರು, ಏ.17 - ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಈ ನಿಯಮಗಳಿಗೆ ವಿರುದ್ಧವಾಗಿ ನಡೆದರೆ ಅಂಥವರಿಗೆ ದಂಡ ವಿಧಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆಯೂ ಆದೇಶ ಮಾಡಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಉನ್ನತ ಮಟ್ಟದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ರಾಜಧಾನಿ ಬೆಂಗಳೂರು ಸೇರಿದಂತೆ 7 ಜಿಲ್ಲೆಗಳಲ್ಲಿ ಕೊರೊನಾ ಕರ್ಫ್ಯೂ ವಿಧಿಸಲಾಗಿದೆ.ಇದರ ಜೊತೆಗೆ ಇನ್ನು ಕೆಲವು ಕಡೆ ಹಾಟ್‌ಸ್ಪಾಟ್‌ಗಳನ್ನು ಗುರುತಿಸುವಂತೆ ಸರ್ಕಾರ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

ಬೆಂಗಳೂರು ಹೊರತುಪಡಿಸಿ ಕಲಬುರಗಿ, ತುಮಕೂರು, ಮೈಸೂರು, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ದ.ಕನ್ನಡ, ವಿಜಯಪುರ, ಬೆಳಗಾವಿ ಸೇರಿದಂತೆ 10 ಕಡೆ ಕೊರೊನಾ ಹಾಟ್‌ಸ್ಪಾಟ್‌ಗಳನ್ನು ಗುರುತು ಮಾಡಿಕೊಂಡು ಇಂತಹ ಕಡೆ ಸೋಂಕು ಹೆಚ್ಚಳವಾಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರ ಕಟ್ಟುನಿಟ್ಟಿನ ಸೂಚನೆ ಕೊಟ್ಟಿದೆ.

ರಾಜ್ಯದಲ್ಲಿ ಇತ್ತೀಚೆಗೆ ರೆಮ್‌ಡಿಸಿವಿಆರ್ ಲಸಿಕೆಯ ಕೃತಕ ಅಭಾವ ಸೃಷ್ಟಿಸಿದ್ದಾರೆ. ಇಂಥ ಜಾಲದ ಮೇಲೆ ಹದ್ದಿನ ಕಣ್ಣಿಡಲು ವಿಶೇಷ ಘಟಕಗಳನ್ನು ಸ್ಥಾಪನೆ ಮಾಡಬೇಕೆಂದು ಡಿಸಿ ಮತ್ತು ಎಸ್ಪಿಗಳಿಗೆ ಸೂಚಿಸಲಾಗಿದೆ.

ಲಸಿಕೆ ಹೊರಡುವ ಸ್ಥಳದಿಂದ ತಲುಪುವ ಕೇಂದ್ರದವರೆಗೂ ಹದ್ದಿನ ಕಣ್ಣಿಡಬೇಕು. ಲಸಿಕೆಯನ್ನು ಎಷ್ಟು ಪ್ರಮಾಣದಲ್ಲಿ ವಿತರಣೆ ಮಾಡಲಾಗಿದೆ, ಯಾವ ವ್ಯಕ್ತಿಗೆ ನೀಡಲಾಗುತ್ತದೆ ಸೇರಿದಂತೆ ಪ್ರತಿಯೊಂದು ಮಾಹಿತಿಯನ್ನು ಕಲೆ ಹಾಕಬೇಕು.

ಯಾರಾದರೂ ಕಾಳಸಂತೆಯಲ್ಲಿ ದುಪ್ಪಟ್ಟು ದರದಲ್ಲಿ ಮಾರಾಟ ಮಾಡಿದರೆ ಅಂಥವರನ್ನು ತಕ್ಷಣವೇ ಬಂಧಿಸಿ ಎಫ್‌ಐಆರ್ ಹಾಕಬೇಕೆಂದು ಸೂಚಿಸಲಾಗಿದೆ.

ಜಿಲ್ಲಾ ಕೇಂದ್ರಗಳಲ್ಲಿರುವ ಚೆಕ್‌ಪೋಸ್ಟ್‌ಗಳನ್ನು ಬಿಗಿಗೊಳಿಸಿ ಹೆಚ್ಚಿನ ಅಧಿಕಾರಿಗಳನ್ನು ನಿಯೋಜನೆ ಮಾಡುವುದು, ಹೊರ ರಾಜ್ಯದಿಂದ ಬರುವವರಿಗೆ ಕೊರೊನಾ ಪರೀಕ್ಷೆ ಮಾಡಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ನೌಕರರಿಗೆ ವೇತನವನ್ನು ಸಕಾಲಕ್ಕೆ ಪಾವತಿ ಮಾಡಬೇಕು, ಅವರು ಕೂಡ ವಾರಿಯರ್ಸ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಮಯಕ್ಕೆ ಸರಿಯಾಗಿ ವೇತನ ನೀಡಲು ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

## ಕೊರೊನಾಗಿಂತ ಚುನಾವಣೆಗೆ ಆಸಕ್ತಿ : ಸಿದ್ದರಾಮಯ್ಯ ತರಾಟೆ



**ಬೆಂಗಳೂರು, ಏ. 17 - ಕೊರೊನಾ ಸಾಂಕ್ರಾಮಿಕ ರೋಗ ನಿಯಂತ್ರಿಸುವ ಬದಲು ರಾಜ್ಯ ಸರ್ಕಾರ ಚುನಾವಣೆಗಳಿಗೆ ಹೆಚ್ಚು ಒತ್ತು ಮತ್ತು ಆಸಕ್ತಿ ತೋರುತ್ತಿದೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.**

**ಸರಣಿ ಟ್ವೀಟ್ ಮೂಲಕ ಬಿಜೆಪಿ ಆಡಳಿತವನ್ನು ತರಾಟೆಗೆ ತೆಗೆದುಕೊಂಡಿರುವ ಅವರು, ಸೋಂಕಿನಿಂದ ಔಷಧಿ ಇಲ್ಲದೆ ಜನರು ಸಾಯುತ್ತಿದ್ದರೂ ಅತ್ತ ಕಡೆ ಗಮನಹರಿಸದೇ, ಚುನಾವಣೆ ಗೆಲುವೇ ಮಾನದಂಡ ಎಂಬಂತೆ ಆಡಳಿತ ನಡೆಸುವವರು ವರ್ತಿಸು ತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು ದೊರೆಯುತ್ತಿಲ್ಲ. ಬಡವರು ಖಾಸಗಿ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಖಾಸಗಿ ಆಸ್ಪತ್ರೆಗ ಳಿಗೆ ಶಿಫಾರಸ್ಸುಗೊಂಡ ರೋಗಿಗಳ ವೆಚ್ಚವನ್ನು ಸರ್ಕಾರವೇ ಭರಿಸಬೇಕೆಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.**

## ತುರ್ತು ಸಭೆಗಳನ್ನಷ್ಟೇ ನಡೆಸಲು ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು, ಏ. 17 – ಕೊರೊನಾ ಎರಡನೇ ಅಲೆ ವೇಗವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಮಟ್ಟದಲ್ಲಿ ಅಧಿಕಾರಿಗಳು ಅವಶ್ಯವಿದ್ದಲ್ಲಿ ತುರ್ತು ಸಭೆಗಳನ್ನಷ್ಟೇ ನಡೆಸುವಂತೆ ಮುಖ್ಯ ಕಾರ್ಯದರ್ಶಿಗಳು ಆದೇಶ ಹೊರಡಿಸಿದ್ದಾರೆ.

ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ತಮ್ಮ ಸಂಬಂಧಪಟ್ಟ ಇಲಾಖೆಯ ಮಾಹಿತಿ ಪಡೆಯುವುದು ಮತ್ತು ಸಲಹೆ ಸೂಚನೆಗಳನ್ನು ನೀಡಬೇಕು. ಮುಂದಿನ ಒಂದೆರಡು ತಿಂಗಳ ಕಾಲ ಒಂದೆಡೆ ಸಭೆ ನಡೆಸಿ, ಜನರನ್ನು ಸೇರಿಸುವುದರಿಂದ ದೂರವಿರಿ.

ಆದಷ್ಟು ವಿಡಿಯೋ ಕಾನ್ಫರೆನ್ಸ್ ಮೂಲಕವೇ ಎಲ್ಲವೂ ಮುಗಿಯಲಿ ಎಂದಿದ್ದಾರೆ. ಸಚಿವಾಲಯದಲ್ಲಿ ಸೋಂಕು ಹಬ್ಬುತ್ತಿರುವ ಹಿನ್ನೆಲೆಯಲ್ಲಿ ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿ ಕಟ್ಟಡಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

# ವಾರ್ಡ್ ಸಮೀಪವೇ ನಾಗರಿಕರಿಗೆ ಲಸಿಕೆ

## ಕಾಳಜಿ ಮೆರೆದ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್



ದಾವಣಗೆರೆ, ಏ.17 - ಕೋವಿಡ್ ಎರಡನೇ ಅಲೆ ಜೋರಾಗುತ್ತಿರುವ ಕಾರಣ ಮುಂಜಾಗ್ರತಾ ದೃಷ್ಟಿಯಿಂದ ನಗರದಲ್ಲಿ ಜನರು ಲಸಿಕೆ ಹಾಕಿಸಿಕೊಳ್ಳಲು ಸಿಜಿ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳತ್ತ ಸ್ವಯಂ ಪ್ರೇರಣೆಯಿಂದ ಹೆಜ್ಜೆ ಹಾಕುತ್ತಿದ್ದಾರೆ.

ನಗರ ಪಾಲಿಕೆ 38ನೇ ವಾರ್ಡಿನ ಸದಸ್ಯ ಮಂಜುನಾಥ್ ಗಡಿಗುಡಾಳ್ ಅವರು, ತಮ್ಮ ವಾರ್ಡಿನ ನಾಗರಿಕರಿಗೆ ವಾರ್ಡ್ ಸಮೀಪವೇ ಲಸಿಕೆ ಹಾಕಿಸುವ ಮುಖೇನ ನಾಗರಿಕರ ಜೀವ ಸುರಕ್ಷತೆಗೆ ಕಾಳಜಿ ತೋರಿದರು.

ಎಂಸಿಸಿ 'ಬಿ' ಬ್ಲಾಕ್ ನ ಐಎಂಎ ಹಾಲ್ ನಲ್ಲಿ ಇಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 3.30ರವರೆಗೆ ಸುಮಾರು ಐದೂವರೆ ತಾಸು ಲಸಿಕಾ ಉತ್ಸವ ಹಮ್ಮಿಕೊಳ್ಳಲಾಯಿತು. ಲಸಿಕಾ ಉತ್ಸವಕ್ಕೆ ಮೇಯರ್ ಎಸ್.ಟಿ. ವೀರೇಶ್ ಚಾಲನೆ ನೀಡಿದರು. ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಚಮನ್‌ಸಾಬ್, ಬಡಾವಣೆ ಹಿರಿಯ ನಾಗರಿಕ ಗುರುಮೂರ್ತಿ ಸೇರಿದಂತೆ ಇತರರು ಇದ್ದರು.

ಸುಮಾರು 400ಕ್ಕೂ ಹೆಚ್ಚು ಮಂದಿ ಕೋವ್ಯಾಕ್ಸಿನ್ ಲಸಿಕೆ ಪಡೆದರು. ಕೊನೆ ಹಂತದಲ್ಲಿ ಸಮಯ ಮೀರಿದಾಗ, ಲಸಿಕೆ ಖಾಲಿಯಾದ ವೇಳೆ ಲಸಿಕೆ ಪಡೆಯಲು ಉತ್ಸುಕತೆಯಿಂದ ಬಂದಿದ್ದ ಸುಮಾರು 50ಕ್ಕೂ ಹೆಚ್ಚು ನಾಗರಿಕರು ವಾಪಸ್ ತೆರಳಿದ್ದಾರೆ.

ಇಲ್ಲಿ ಕೋವ್ಯಾಕ್ಸಿನ್ ಲಸಿಕೆ ಮಾತ್ರ ನೀಡಲಾಗುತ್ತಿತ್ತು. ಹಿಂದೆ ಮೊದಲ ಹಂತದಲ್ಲಿ ಕೋವಿಶೀಲ್ಡ್ ಲಸಿಕೆ ಪಡೆದು ಎರಡನೇ ಹಂತದಲ್ಲಿ ಲಸಿಕೆ ಪಡೆಯಲು ಬಂದಿದ್ದ ಸುಮಾರು 15ಕ್ಕೂ ಹೆಚ್ಚು ಮಂದಿ ಕೋವಿಶೀಲ್ಡ್ ಲಸಿಕೆ ಪಡೆದವರು ಕೋವ್ಯಾಕ್ಸಿನ್ ಲಸಿಕೆ ಪಡೆಯಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾದ ನಂತರ ಸಿಜಿ ಆಸ್ಪತ್ರೆಯತ್ತ ತೆರಳಿದರು. ಹೀಗೆ ಕೋವಿಶೀಲ್ಡ್ ಲಸಿಕೆ ಪಡೆದಿದ್ದ ನಾಕರಿಕರಿಗೆ ಮೇಯರ್ ವೀರೇಶ್, ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಸಲಹೆ ನೀಡಿದರು.

ಆಸ್ಪತ್ರೆಗಳಲ್ಲಿ ಲಸಿಕೆ ಪಡೆಯಲು ಕೆಲವರು ಹಿಂದೇಟು ಹಾಕುತ್ತಿರುವುದನ್ನು ಮನಗಂಡು ವಾರ್ಡಿನ ಬಳಿಯೇ ಜನರು ಲಸಿಕೆ ಪಡೆಯಲೆಂಬ ಅಭಿಲಾಷೆ ನನಗಿತ್ತು. ಸ್ವಂತ ಖರ್ಚಿನಲ್ಲಿ ಕೋವಿಡ್ ಲಸಿಕೆ ಪಡೆಯುವ ಬಗ್ಗೆ ನನ್ನ ವಾರ್ಡ್ ನಲ್ಲಿ ಕಳೆದ ಎರಡು ದಿನಗಳಿಂದ ಅಷ್ಟೇ ಅಲ್ಲದೇ ಲಸಿಕೆಯ ಈ ದಿನದಂದೂ ಜನಜಾಗೃತಿ ಮೂಡಿಸಲಾಗಿತ್ತು. ಲಸಿಕಾ ಉತ್ಸವಕ್ಕೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದಕ್ಕೆ ಲಸಿಕೆ ಪಡೆಯಲು ಜನ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದೇ ಸಾಕ್ಷಿ. ಮಧ್ಯಾಹ್ನ 2 ಗಂಟೆವರೆಗೆ ಲಸಿಕಾ ಉತ್ಸವವಿತ್ತು. ಜನ ಹೆಚ್ಚಾದ ಕಾರಣ ಒಂದೂವರೆ ತಾಸು ಹೆಚ್ಚಾಗಿ ವಿಸ್ತರಿಸಲಾಯಿತು. ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಎರಡೂ ಲಸಿಕೆಗಳು ಇದ್ದಿದ್ದರೆ ಜನರಿಗೆ ಅನುಕೂಲವಾಗುತ್ತಿತ್ತು. ಪಾಲಿಕೆಯ ಪ್ರತಿ ವಾರ್ಡ್ ನಲ್ಲೂ ಲಸಿಕಾ ಉತ್ಸವ ನಡೆದಿದ್ದರೆ ಸಾಕಷ್ಟು ಜನರು ಲಸಿಕೆ ಪಡೆಯುವಂತಾಗುತ್ತಿತ್ತು ಎಂದು ಗಡಿಗುಡಾಳ್ ಮಂಜುನಾಥ್ 'ಜನತಾವಾಣಿ'ಗೆ ತಿಳಿಸಿದ್ದಾರೆ.



## ಲಸಿಕೆ ಪಡೆದ ಶಾಸಕ ಎಸ್‌ವಿಆರ್ ದಂಪತಿ

ಜಗಳೂರು, ಏ.17 - ಶಾಸಕರು, ರಾಜ್ಯ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಎಸ್.ವಿ. ರಾಮಚಂದ್ರ, ಹಾಗೂ ಅವರ ಧರ್ಮಪತ್ನಿ ಇಂದಿರಾ ರಾಮಚಂದ್ರ ಅವರು ದಾವಣಗೆರೆ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆಯನ್ನು ಹಾಕಿಸಿಕೊಂಡರು. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಲಸಿಕೆ ಉತ್ಸವ ಆಚರಿಸಲು ಕರೆಕೊಟ್ಟಿದ್ದು, ನಾವುಗಳು ಇಂದು ಲಸಿಕೆಯನ್ನು ಪಡೆದುಕೊಂಡಿರುವುದಾಗಿ ಶಾಸಕರು ತಿಳಿಸಿದರು. 45 ವರ್ಷ ವಯಸ್ಸಿನವರು ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆಯನ್ನು ಪಡೆದುಕೊಳ್ಳಬೇಕು, ಕೊರೊನಾದಿಂದ ಮುಕ್ತರಾಗಬೇಕು ಎಂದು ಶಾಸಕರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಡಿಹೆಚ್‌ಓ ನಾಗರಾಜ್, ಡಾ. ಮಲ್ಲಪ್ಪ, ಡಾ. ಯತೀಶ್, ಡಾ. ಅಮಿತ್, ಡಾ. ಗೋಪಾಲಕೃಷ್ಣ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಚ್. ನಾಗರಾಜ್, ಸೀನಿಯರ್ ಲ್ಯಾಬ್ ಟೆಕ್ನೀಷಿಯನ್ ನಾಗರಾಜ್ ಇನ್ನಿತರರು ಹಾಜರಿದ್ದರು.

## ಕುಂಭಮೇಳಕ್ಕೆ ಮತ್ತೊಂದು ಅಖಾಡಾದ ವಿದಾಯ

ಡೆಹರಾಡೂನ್, ಏ. 17 – ಕುಂಭಮೇಳದಲ್ಲಿ ಪಾಲ್ಗೊಂಡಿರುವ ಅಖಾಡಗಳಲ್ಲಿ ಪ್ರಮುಖವಾಗಿರುವ ಜೂನಾ ಅಖಾಡಾ, ಕೊರೊನಾ ಹಿನ್ನೆಲೆಯಲ್ಲಿ ಅವಧಿಗೆ ಮೊದಲೇ ಕುಂಭ ಮೇಳಕ್ಕೆ ವಿದಾಯ ಹೇಳಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಾಂಕೇತಿಕವಾಗಿ ಕುಂಭಮೇಳ ನಡೆಸುವಂತೆ ಕರೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

ಹರಿದ್ವಾರದಲ್ಲಿ ನಡೆಸಲಾಗುತ್ತಿರುವ ಕುಂಭಮೇ ಳದಲ್ಲಿ ಲಕ್ಷಾಂತರ ಜನರು ಪಾಲ್ಗೊಳ್ಳುತ್ತಿರುವುದರಿಂದ ಕೊರೊನಾ ಹರಡುವ ಆತಂಕವಿದೆ. ಭಾರತ ಹಾಗೂ ದೇಶದ ಜನರು ಮೊದಲ ಆದ್ಯತೆ. ಕೊರೊನಾ ಹಿನ್ನೆಲೆಯಲ್ಲಿ ನಾವು ಕುಂಭಕ್ಕೆ ರೂಪಿಸಲಾಗಿದ್ದ ಎಲ್ಲ ದೇವರುಗಳನ್ನು ವಿಸರ್ಜಿಸಿದ್ದೇವೆ. ಜೂನ್ ಅಖಾಡಾದ ಕುಂಭಮೇಳ ಮುಕ್ತಾಯವಾಗಿದೆ ಎಂದು ಜೂನಾ ಅಖಾಡಾದ ಮಹಾಮಂಡಲೇಶ್ವರ ಸ್ವಾಮಿ ಅವಧೇಶಾನಂದ ಗಿರಿ ಅವರು ತಿಳಿಸಿದ್ದಾರೆ.

ಈ ಹಿಂದೆ ನಿರಂಜನಿ ಅಖಾಡಾ ಸಹ ಕುಂಭ ಮೇಳಕ್ಕೆ ವಿದಾಯ ಹೇಳಿತ್ತು. ಕುಂಭಮೇಳದಲ್ಲಿ ಪಾಲ್ಗೊಂಡ 1,700 ಜನರಲ್ಲಿ ಸೋಂಕಿರುವುದು ಇದುವರೆಗೂ ಕಂಡು ಬಂದಿದೆ.

# ಮಡಿವಾಳ ನಿಗಮದ ಸೌಲಭ್ಯ ಸದ್ಬಳಕೆಗೆ ಕರೆ

## ಜಾಗೃತಿ ಸಭೆಯಲ್ಲಿ ನಿಗಮದ ನಿರ್ದೇಶಕ ಸುರೇಶ್ ಮಡಿವಾಳ ಕಾರ್ಕಳ



ದಾವಣಗೆರೆ, ಏ.17 - ಮಡಿವಾಳ ಸಮಾಜದ ಅಭಿವೃದ್ಧಿಗಾಗಿಯೇ ಸ್ಥಾಪಿಸಲಾಗಿರುವ ರಾಜ್ಯ ಶ್ರೀ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ ನೀಡಲಾಗುವ ಸಾಲ ಸೌಲಭ್ಯವನ್ನು ಸದ್ವಿನಿಯೋಗ ಪಡಿಸಿಕೊಳ್ಳಬೇಕೆಂದು ನಿಗಮದ ನಿರ್ದೇಶಕ ಸುರೇಶ್ ಮಡಿವಾಳ ಕಾರ್ಕಳ ಕರೆ ನೀಡಿದರು.

ಶನಿವಾರ ವಿನೋಬನಗರದಲ್ಲಿನ ಶ್ರೀ ಮಡಿವಾಳ ಮಾಚಿದೇವ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಜಾಗೃತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಿಗಮದಲ್ಲಿ ಮಧ್ಯವರ್ತಿಗಳ ಹಾವಳಿ ಇದ್ದರೆ ಅಂತವರ ವಿರುದ್ಧಕ್ರಮ ಕೈಗೊಳ್ಳುತ್ತೇನೆ. ಇದಲ್ಲದೇ ಮಧ್ಯವರ್ತಿಗಳಿಗೆ ಅಧಿಕಾರಿಗಳು ಸಾಥ್ ನೀಡಿದರೆ ಅಂಥವರ ವಿರುದ್ಧವೂ ಇಲಾಖಾ ನಿಯಮಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ನಮ್ಮ ಸಮಾಜದವರು ಹಾರ-ತುರಾಯಿ, ಸನ್ಮಾನ ಮಾಡುವುದರಲ್ಲೇ ಸಮಯ ವ್ಯರ್ಥ ಮಾಡುವ ಬದಲು ಸಮಾಜದ ಒಗ್ಗೂಡಿಸುವಿಕೆಗಾಗಿ ಕೆಲಸ ಮಾಡಬೇಕು. ಇನ್ನೊಬ್ಬರನ್ನು ದೂಷಿಸುವ ಬದಲು ಸಂಘಟಿತರಾಗಿ. ಶಿಕ್ಷಣದ ಕಡೆ ಗಮನ ಕೊಡಿ. ಅಲ್ಲದೇ ಸರ್ಕಾರದಿಂದ ಮಡಿವಾಳರಿಗೆ ಸಿಗುವ ಸೌಲಭ್ಯಗಳನ್ನು ಸಮಾಜದ ಕೆಳ ಹಂತದ ಜನರಿಗೆ ಮುಟ್ಟಿಸುವ ಹೊಣೆ ನಿಮ್ಮದು ಎಂದು ಹೇಳಿದರು .

ಮಡಿವಾಳ ಸಮಾಜದ ರಾಜ್ಯ ಘಟಕದ ಅಧ್ಯಕ್ಷೆ ಪದ್ಮಾ ವರ್ತೂರ್ ಮಾತನಾಡಿ, ಮಹಿಳೆಯರು ಸಂಘಟಿತರಾಗಿ ಬೀದಿಗಿಳಿದು ಮೀಸಲಾತಿಗಾಗಿ ಹೋರಾಟ ಮಾಡಬೇಕಾಗಿದೆ ಎಂದರು.

ಜಿಲ್ಲಾ ಸಂಘದ ಅಧ್ಯಕ್ಷ ಎಂ ನಾಗೇಂದ್ರಪ್ಪ, ಕಾರ್ಯಾಧ್ಯಕ್ಷ ಆವರಗೆರೆ ಹೆಚ್.ಜಿ.ಉಮೇಶ್, ಹಾಗೂ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ನಾಗಮ್ಮ ಮಾತನಾಡಿದರು. ಇದೇ ವೇಳೆ ಸುರೇಶ್ ಕಾರ್ಕಳ ಹಾಗೂ ಪದ್ಮ ವರ್ತೂರ್ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸಂಘದ ಪದಾಧಿಕಾರಿಗಳಾದ ಪಿ.ಮಂಜುನಾಥ್, ಎಂ ಆರ್ ಧನಂಜಯ ವಿಜಯಕುಮಾರ್, ಸುರೇಶ್ ಕೋಗುಂಡೆ, ಅಜ್ಜಯ್ಯ, ಎಂ.ವೈ. ಸತೀಶ್, ಅಂಜಿನಪ್ಪ ಪೂಜಾರ್, ಚಿಕ್ಕಣ್ಣ, ಸುಭಾಷ್, ಯೋಗ ಗುರು ಪರಶುರಾಮ್, ಭೀಮಣ್ಣ ಮಡಿವಾಳ, ಮಡಿಕಟ್ಟೆ ಯುವಕರ ಸಂಘದ ಅಧ್ಯಕ್ಷ ಫಕ್ಕೀರಸ್ವಾಮಿ ಇತರರು ಉಪಸ್ಥಿತರಿದ್ದರು.

## ಖೂಬಾ ಉಚ್ಚಾಟನೆ

ಬೆಂಗಳೂರು, ಏ. 17 - ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಧಿಕೃತ ಅಭ್ಯರ್ಥಿಯಾದ ಶರಣು ಸಲಗರ ವಿರುದ್ಧ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಖೂಬಾ ಶಿಸ್ತು ಉಲ್ಲಂಘಿಸಿದ್ದಾರೆ. ಕೊನೆ ಕ್ಷಣದಲ್ಲಿ ಮನವೊಲಿಕೆ ಯತ್ನ ನಡೆಸಿದರೂ ಅವರು ಕಣದಿಂದ ಹಿಂದೆ ಸರಿದಿಲ್ಲ ಎಂದು ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ್ ಹೇಳಿದ್ದಾರೆ.

# ಕೇಂದ್ರ-ರಾಜ್ಯಗಳಿಂದ ಪರಿಶಿಷ್ಟರ ಅನುದಾನ ಕಡಿತ

## ಮಾದಿಗ ದಂಡೋರ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಬಿ. ನರಸಿಂಹ ತರಾಟೆ



ದಾವಣಗೆರೆ, ಏ. 17 - ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಯವ್ಯಯದಲ್ಲಿ ಮೀಸಲಿಡುವ ಅನುದಾನ ಕಡಿತಗೊಳಿಸಿ ಅನ್ಯಾಯ ಮಾಡಿವೆ ಎಂದು ರಾಷ್ಟ್ರೀಯ ಮಾದಿಗ ದಂಡೋರ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಬಿ.ನರಸಿಂಹ ಆರೋಪಿಸಿದ್ದಾರೆ.

ನಗರದ ರೋಟರಿ ಬಾಲಭವನದಲ್ಲಿ ಶನಿವಾರ ಮಾದಿಗ ದಂಡೋರ ಜಿಲ್ಲಾ ಸಮಿತಿ ವತಿಯಿಂದ ಜಿಲ್ಲೆಯ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಆಯೋಜಿಸಿದ್ದ ಅಭಿನಂದನಾ ಮತ್ತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಶೇ.18 ರಡಿ 5.40 ಲಕ್ಷ ಕೋಟಿ ರೂ. ಮೀಸಲಿಡಬೇಕು. ಆದರೆ, ಈ ಬಾರಿ ಬಜೆಟ್‌ನಲ್ಲಿ ಕೇವಲ 50 ಸಾವಿರ ಕೋಟಿ ರೂ. ಮೀಸಲಿಟ್ಟಿದೆ. ಅದೇ ರೀತಿ ರಾಜ್ಯದಲ್ಲಿ ಶೇ.24.1ರಡಿ 60 ಸಾವಿರ ಕೋಟಿ ರೂ. ಮೀಸಲಿಡಬೇಕು. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಈ ಬಾರಿ ಬಜೆಟ್‌ನಲ್ಲಿ 30 ಸಾವಿರ ಕೋಟಿ ರೂ. ಮೀಸಲಿಡಲಾಗಿದೆ ಎಂದಿದ್ದಾರೆ.

ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 500 ಕೋಟಿ ರೂ. ನೀಡುವ ನಿರೀಕ್ಷೆ ಇತ್ತು. ಆದರೆ, ಬೇರೆ ಅಭಿವೃದ್ಧಿ ನಿಗಮಗಳಿಗೆ 500 ಕೋಟಿ ರೂ. ನೀಡಿ, ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ಕೇವಲ 50 ಕೋಟಿ ನೀಡಿ ಅನ್ಯಾಯ ಮಾಡಲಾಗಿದೆ. ಸ್ಥಳೀಯ ಸಂಸ್ಥೆಗಳ ಅನುದಾನದಲ್ಲೂ ತಾರತಮ್ಯವಾಗಿದೆ ಎಂದವರು ಆಕ್ಷೇಪಿಸಿದ್ದಾರೆ.

ಗ್ರಾಮ ಪಂಚಾಯ್ತಿಗಳಲ್ಲಿ ಮಾದಿಗ ಸಮುದಾಯದಿಂದ ಆಯ್ಕೆಯಾದವರು. ನಮ್ಮ ಸಮುದಾಯದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿ, ಸರ್ಕಾರಿ ಸೌಲಭ್ಯಗಳನ್ನು ತಲುಪಿಸಬೇಕು. ಪ್ರತಿನಿಧಿಗಳು ಕಾನೂನಿನ ಅರಿವು ಪಡೆದು ಗ್ರಾ.ಪಂ. ಆಡಳಿತದ ಕಾರ್ಯ ವೈಖರಿಯನ್ನು ಮನನ ಮಾಡಿಕೊಳ್ಳಬೇಕು ಎಂದವರು ಹೇಳಿದರು.

ಮಾದಿಗ ದಂಡೋರ ಸಮಿತಿ ಜಿಲ್ಲಾಧ್ಯಕ್ಷ ಹೆಚ್. ಸಿ.ಗುಡ್ಡಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಜನಪ್ರತಿನಿಧಿಗಳು ನಮ್ಮ ಸಮುದಾಯದ ಅನುಭವಿ ಮಾಜಿ ಗ್ರಾಪಂ ಅಧ್ಯಕ್ಷರು, ಸದಸ್ಯರ ಬಳಿ ಗ್ರಾಪಂ ಆಡಳಿತದ ಬಗ್ಗೆ ತಿಳಿದುಕೊಂಡು ಸಮಾಜದ ಅಭಿವೃದ್ಧಿಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಇತ್ತೀಚಿಗೆ ನಿಧನರಾದ ಒಳ ಮೀಸಲಾತಿ ಹೋರಾಟಗಾರರಾದ ಜಿ.ರಾಮಕೃಷ್ಣ ಹಾಗೂ ಕೆ. ಬಿ.ಸಿದ್ದಯ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲೆಯ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್. ಡಿ.ಗೋಣೆಪ್ಪ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮಾದಿಗ ಸಮುದಾಯದ ಟಿ.ಮರಿಯಪ್ಪ, ಬಿ.ಹೆಚ್.ಶೇಖರಪ್ಪ ಮಳಲಕೆರೆ, ಪಿ.ನಾಗರಾಜ್, ಎ.ಕೆ.ನಾಗೇಂದ್ರಪ್ಪ, ಜಿ.ಎಚ್. ತಮ್ಮಣ್ಣ, ಎನ್.ಕೆಂಚಪ್ಪ ಈಚಘಟ್ಟ, ರವಿಕುಮಾರ್, ಹುಲಿಗಪ್ಪ ಬಳ್ಳಾರಿ, ಹೆಗ್ಗೆರೆ ರಂಗಪ್ಪ, ಹನುಮಂತಪ್ಪ ಕುಂಬಳೂರು ಮತ್ತಿತರರು ಉಪಸ್ಥಿತರಿದ್ದರು.

# ಕೊರೊನಾ : ಕೇಂದ್ರ ಕ್ರಮ ತೆಗೆದುಕೊಳ್ಳದಿದ್ದರೆ ವಿನಾಶ

**ಕೇಂದ್ರ ಸರ್ಕಾರದಿಂದ ಮಹಾ ಅವ್ಯವಸ್ಥೆ : ಕಾಂಗ್ರೆಸ್ ತರಾಟೆ**

ನವದೆಹಲಿ, ಏ. 17 – ಕೊರೊನಾ ವಿರುದ್ಧದ ಸಮರದಲ್ಲಿ ಕೇಂದ್ರ ಸರ್ಕಾರ ದೊಡ್ಡ ಅವ್ಯವಸ್ಥೆ ಮಾಡಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಅಭೂತಪೂರ್ವ ವಿನಾಶ ಉಂಟಾಗಲಿದೆ ಎಂದು ಎಚ್ಚರಿಸಿದೆ.

ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಕೊರೊನಾ ಪರಿಸ್ಥಿತಿ ಕುರಿತು ಚರ್ಚಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಪಕ್ಷದ ಹಿರಿಯ ವಕ್ತಾರ ಪಿ. ಚಿದಂಬರಂ, ಸಮಿತಿಯ ಸದಸ್ಯರು ನೀಡಿರುವ ನಿಖರ ಸಲಹೆಗಳನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಮೂಲಕ ತಲುಪಿಸಲಾಗುವುದು ಎಂದಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿಣಿಯು ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದು, ಕೇಂದ್ರ ಸರ್ಕಾರ ಕೊರೊನಾ ನಿಭಾಯಿಸುವುದಕ್ಕೆ ಸಂಬಂಧಿಸಿದಂತೆ 14 ವಿಷಯಗಳಲ್ಲಿ ವಿಫಲವಾಗಿದೆ ಎಂದು ತಿಳಿಸಿದೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಮನಮೋಹನ್ ಸಿಂಗ್, ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದರು.

ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಕೊರೊನಾ ಪರಿಸ್ಥಿತಿ ಎದುರಿಸಲು ಮೋದಿ ಸರ್ಕಾರ ಯಾವುದೇ ಸಿದ್ಧತೆ ಮಾಡಿಕೊಂಡಿಲ್ಲ. ತಾತ್ಕಾಲಿಕ ಕ್ರಮಗಳನ್ನು ಮಾತ್ರ ತೆಗೆದುಕೊಳ್ಳುತ್ತಿದೆ. ದೇಶದ ಲಸಿಕೆ ವ್ಯವಸ್ಥೆ 25 ವರ್ಷಗಳ ಹಿಂದೆ ಹೋಗಿದೆ ಎಂದು ಟೀಕಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲಿ ಮಾತನಾಡಿದ ಸೋನಿಯಾ ಗಾಂಧಿ, ಕೊರೊನಾಗೆ ಚಿಕಿತ್ಸೆ ನೀಡುವ ಎಲ್ಲ ಔಷಧಿ ಹಾಗೂ ಉಪಕರಣಗಳನ್ನು ಜಿ.ಎಸ್.ಟಿ. ತೆರಿಗೆಯಿಂದ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೊರೊನಾ ಪರಿಸ್ಥಿತಿ ಎದುರಿಸುವುದು ರಾಷ್ಟ್ರೀಯ ಸವಾಲು ಎಂದು ಕಾಂಗ್ರೆಸ್ ಸದಾ ಭಾವಿಸಿದೆ. ಇದು ಪಕ್ಷ ರಾಜಕೀಯದಿಂದ ಮೇಲಿರಿಸಿದೆ. ನಿಜವಾದ ಪ್ರಜಾಪ್ರಭುತ್ವ ಸಂಪ್ರದಾಯಗಳ ಅನ್ವಯ ಕಾಂಗ್ರೆಸ್ ಸಲಹೆಗಳನ್ನು ಸರ್ಕಾರ ಪರಿಗಣಿಸಲಿದೆ ಎಂದು ಸೋನಿಯಾ ಗಾಂಧಿ ಆಶಿಸಿದ್ದಾರೆ.

ರಾಜ್ಯಗಳ ಜೊತೆ ಕೇಂದ್ರ ಸರ್ಕಾರ ಪಕ್ಷಪಾತ ಮಾಡುತ್ತಿದೆ ಎಂದು ಆರೋಪಿಸಿರುವ ಅವರು, ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ಆಡಳಿತದ ಬೇಡಿಕೆಗಳ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದೂ ಆರೋಪಿಸಿದ್ದಾರೆ.

ಕೊರೊನಾಗೆ ಸಂಬಂಧಿಸಿದಂತೆ ಒಂದು ವರ್ಷದ ಅನುಭವ ಇದ್ದರೂ ಸಹ ನಾವು ಮತ್ತೆ ಎಚ್ಚರ ತಪ್ಪಿದ ಸ್ಥಿತಿಯಲ್ಲಿ ಸಿಕ್ಕಿ ಬಿದ್ದಿದ್ದೇವೆ. ಪ್ರತಿಪಕ್ಷಗಳ ರಚನಾತ್ಮಕ ಸಲಹೆ ಕೇಳುವ ಬ ದಲು ಕೇಂದ್ರ ಸಚಿವರು ಸಲಹೆಗಳನ್ನು ನೀಡುವ ಪ್ರತಿಪಕ್ಷದ ನಾಯಕರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ ಎಂದು ಸೋನಿಯಾ ಗಾಂಧಿ ಟೀಕಿಸಿದ್ದಾರೆ.

REQUIRED
India's largest Financial Company is offering Income Opportunity for Senior Citizens, Retired Teachers / Lecturers / Bankers, Doctors, Businessmen and Home Makers with Fixed Payout and Incentives.
Call : 94494 04209

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್)
Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

ಪತ್ರ ಕಳೆದು ಹೋಗಿರುವ ಬಗ್ಗೆ ಪ್ರಕಟಣೆ
ದಿನಾಂಕ : 23.01.2003 ರಂದು 1ನೇ ಪುಸ್ತಕದ 10508/ 2002-2003 ರ ನಂಬರಿನಲ್ಲಿ ದಾವಣಗೆರೆಯ ಸಬ್‌ರಿಜಿಸ್ಟರ್ ಆಫೀಸ್‌ನಲ್ಲಿ ರಿಜಿಸ್ಟರ್ ಆದ ಗುತ್ತಿಗೆ ಒಪ್ಪಂದ ಮೂಲ ಪತ್ರವು ದಿನಾಂಕ : 05.04.2021ರಂದು ಕಳೆದುಹೋಗಿರುತ್ತದೆ. ಸದರಿ ಪತ್ರವು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಕಂಡ ವಿಳಾಸದಾರರಿಗೆ ತಲುಪಿಸಲು ಈ ಪ್ರಕಟಣೆಯನ್ನು ಹಾಕಿಸಲಾಗಿದೆ. ಹೊರಡಿಸಲಾಗಿದೆ.
ಷೆಡ್ಯೂಲ್ : 2002-03ನೇ ಇಸವಿಯ 1ನೇ ಪುಸ್ತಕದ 10508ನೇ ನಂಬರಿನ ಗುತ್ತಿಗೆ ಒಪ್ಪಂದ ಪತ್ರದ ಮೂಲ ಪತ್ರ ಸದರಿ ಪತ್ರದಲ್ಲಿ ಇರುವ ಸ್ವತ್ತುಗಳ ವಿವರ. 1) ಸೈಟ್ ನಂಬರ್ 1179/ಎ, ಅಳತೆ 46+0x100 ಚೆಕ್ಕುಬಂದಿ : ಪೂರ್ವಕ್ಕೆ-ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-1179/ಬಿ ಸ್ವತ್ತು. 2) ಸೈಟ್‌ನಂ 1179/B, ಪೂರ್ವ-ಪಶ್ಚಿಮ 0 ಅಡಿ+20 ಹಾಗೂ ಉತ್ತರ-ದಕ್ಷಿಣ 180 ಇರುವ ಜಾಗಕ್ಕೆ ಚೆಕ್ಕುಬಂದಿ. ಪೂರ್ವ- 1179ರ ಸರ್ಕಾರಿ ನೌಕರರ ಸಮುದಾಯ ಭವನ, ಪಶ್ಚಿಮಕ್ಕೆ -ರಸ್ತೆ, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-ರಸ್ತೆ. 3) ಸೈಟ್ ನಂ. 1179/ಸಿ, ಪೂರ್ವ-ಪಶ್ಚಿಮ 20x10, ಜಾಗಕ್ಕು ಚಕ್ಕುಬಂದಿ : ಪೂರ್ವ-ಪ್ರಾಧಿಕಾರದ ಜಾಗ, ಪಶ್ಚಿಮಕ್ಕೆ-ರಸ್ತೆ, ಉತ್ತರಕ್ಕೆ ತುಂಡು ಜಾಗ, 1179/ಬಿ, ದಕ್ಷಿಣಕ್ಕೆ - ಪ್ರಾಧಿಕಾರದ ಜಾಗ.
ದಿನಾಂಕ :
ದೂರವಾಣಿ : 94489 48135
ಸಹಿ/- ಅಧ್ಯಕ್ಷರು
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ (ರಿ.)
ದಾವಣಗೆರೆ. 88917 20799

ಶ್ರೀ ವಾಲ್ಮೀಕಿ ಸಾಂಸ್ಕೃತಿಕ ಸಭಾ ಭವನ
ನಾಯಕ ವಿದ್ಯಾರ್ಥಿ ನಿಲಯದ ಆವರಣದ 1ನೇ ಮಹಡಿ, ಕೆಇಬಿ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.
ಮದುವೆ - ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ಇದೆ
500 ಕುರ್ಚಿಗಳನ್ನೊಂದಿರುವ ಸಭಾ ಭವನ, 250 ಕುರ್ಚಿಗಳಿರುವ ಊಟದ ಹಾಲ್, ಉಳಿದುಕೊಳ್ಳಲು 9 ರೂಂಗಳು, ಅಡುಗೆ ಪಾತ್ರೆ ಸಾಮಾನುಗಳು ಎಲ್ಲಾ ಸೇರಿ ಕೇವಲ ರೂ. 15,000 ಗಳಿಗೆ ಮದುವೆ ಮತ್ತು ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :
ಬಿ. ವೀರಣ್ಣ, ಅಧ್ಯಕ್ಷರು, ನಾಯಕ ವಿದ್ಯಾರ್ಥಿ ನಿಲಯ, ಪಿ.ಜೆ. ಬಡಾವಣೆ, ದಾವಣಗೆರೆ. 80951 71787

## ದೇವರ ದಾಸಿಮಯ್ಯ ಜಯಂತಿ ಆಚರಣೆ



ದಾವಣಗೆರೆ, ಏ. 17 - ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಡಳಿತ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಆದ್ಯ ವಚನಕಾರ ದೇವರ ದಾಸಿಮಯ್ಯ ಅವರ ಜಯಂತಿಯನ್ನು, ದೇವರ ದಾಸಿಮಯ್ಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ. ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಜಿ.ಪಂ.ಉಪಕಾರ್ಯದರ್ಶಿ ಆನಂದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಹಾಗೂ ದಾವಣಗೆರೆ ಜಿಲ್ಲೆಯ ನೇಕಾರ ವೇದಿಕೆ ಅಧ್ಯಕ್ಷ ಪ್ರೊ.ಎಲ್.ಸತ್ಯನಾರಾಯಣ್, ಸಮುದಾಯ ಒಕ್ಕೂಟದ ಅಧ್ಯಕ್ಷ ಡಿ.ಬಸವರಾಜ ಗುಬ್ಬಿ, ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ಏಕಬೋಟೆ, ಉಪಾಧ್ಯಕ್ಷ ಬುಗಡೆ ಬೆನಕಲ್ಲಪ್ಪ, ನಿರ್ದೇಶಕರಾದ ಗಣೇಶ್ ಕ್ಷೀರಸಾಗರಿ, ಕರಿಬಸಪ್ಪ ಐರಣಿ, ಪ್ರಸನ್ನ ಕುಮಾರ್, ಟಿ.ಅಜ್ಜೇಶ್, ಪಾಲಾಕ್ಷಪ್ಪ, ರಂಗನಾಥ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ ಹಾಗೂ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

## ಕೋವಿಡ್ ನಿಯಂತ್ರಣ: ಸಾರ್ವಜನಿಕರು ಕಟ್ಟುನಿಟ್ಟಾಗಿ ಮಾರ್ಗಸೂಚಿ ಪಾಲಿಸಲು ಡಿಸಿ ಸೂಚನೆ

ದಾವಣಗೆರೆ, ಏ.17 - ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್-19 ಪ್ರಕರಣಗಳು ವರದಿಯಾಗುತ್ತಿದೆ. ಕೋವಿಡ್ 2ನೇ ಅಲೆಯ ಅಪಾಯ ಕಂಡುಬರುತ್ತಿದ್ದು, ಇದನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರವು ಈ ಹಿಂದಿನ ಸಡಿಲಿಕೆಯ ಮಾರ್ಗಸೂಚಿಗಳಲ್ಲಿ ಕೆಲವು ಬದಲಾವಣೆ ಮಾಡಿ ಮರು ಆದೇಶ ಹೊರಡಿಸಿದೆ. ಸಾರ್ವಜನಿಕರು ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಸಾಮಾಜಿಕ ಆಚರಣೆಗಳು, ಸಮಾರಂಭಗಳಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯಂತೆ 3.25 ಚ.ಮಿ ಪ್ರತಿ ವ್ಯಕ್ತಿಗೆ ಮಾನದಂಡವನ್ನು ಪಾಲಿಸುವುದು. ಕಡ್ಡಾಯವಾಗಿರುತ್ತದೆ.

ತೆರೆದ ಪ್ರದೇಶಗಳಲ್ಲಿ 200 ಜನ ಮೀರದಂತೆ ಮದುವೆ ನೆರವೇರಿ ಸಬಹುದು. ಕಲ್ಯಾಣ ಮಂಟಪ, ಸಭಾಂಗಣಗಳು, ಹಾಲ್‌ಗಳು ಇತ್ಯಾದಿ ಮುಚ್ಚಿದ ಪ್ರದೇಶಗಳಲ್ಲಿ 100 ಜನ ಮೀರದಂತೆ ಜನ ಸೇರಿಸಿ ಮದುವೆ ಕಾರ್ಯ ನಡೆಸಬಹುದು.



ಜನ್ಮದಿನ ಹಾಗೂ ಇತರೆ ಆಚರಣೆಗಳನ್ನು ತೆರೆದ ಪ್ರದೇಶಗಳಲ್ಲಿ 50 ಜನ ಮೀರದಂತೆ. ಸಭಾಂಗಣಗಳು/ಹಾಲ್‌ಗಳು ಇತ್ಯಾದಿ ಮುಚ್ಚಿದ ಪ್ರದೇಶಗಳಲ್ಲಿ 25 ಜನ ಮೀರದಂತೆನಡೆಸುವುದು. ಅಂತ್ಯಕ್ರಿಯೆಯಲ್ಲಿ 25 ಜನ ಮೀರದಂತೆ ಪಾಲ್ಗೊಳ್ಳುವುದು. ಇತರೆ ಸಮಾರಂಭಗಳಿಗೆ 50 ಜನ ಮೀರದಂತೆ ಹಾಲ್‌ನ ವಿಸ್ತೀರ್ಣಕ್ಕೆ ಅನುಗುಣವಾಗಿ ನಡೆಸುವುದು. ಧಾರ್ಮಿಕ ಆಚರಣೆಗಳು ಅಥವಾ ಸಮಾರಂಭ ಗಳನ್ನು ನಿಷೇಧಿಸ ಲಾಗಿದೆ. ರಾಜಕೀಯ ಆಚರಣೆಗಳು/ಸಮಾರಂಭ ಗಳನ್ನು ತೆರೆದ ಪ್ರದೇಶಗಳಲ್ಲಿ 200 ಜನ ಮೀರದಂತೆ ನಡೆಸುವುದು.

ಜನರು ಕಡ್ಡಾಯವಾಗಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಹೊರಡಿಸಿರುವ ಪ್ರಮಾಣಿತ ಕಾರ್ಯವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಭಾಂಗಣ, ಕಲ್ಯಾಣ ಮಂಟಪ, ಸಿನಿಮಾ ಮಂದಿರ, ಹಾಲ್‌ಗಳು ಮತ್ತು ಆಚರಣೆಗಾಗಿ ಜನ ಸೇರುವ ಇತ್ಯಾದಿ ಪ್ರದೇಶಗಳ ಉಸ್ತುವಾರಿ ಹೊಂದಿದವರು ಕಡ್ಡಾಯವಾಗಿ ಸ್ಯಾನಿಟೈಸ್ ಕ್ರಮಗಳನ್ನು ತಪ್ಪದೇ ಅನುಸರಿಸಬೇಕು. ಸಾಮಾಜಿಕ ಅಂತರ ಪಾಲನೆ ಮಾಡದ, ಮುಖಗವಸು (ಮಾಸ್ಕ್) ಧರಿಸದೇ ಇರುವ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದಕ್ಕೆ ಈ ಹಿಂದಿನಂತೆ ದಂಡವನ್ನು ವಿಧಿಸಲಾಗುವುದು. ಮಾರ್ಗಸೂಚಿಗಳನ್ನು ಉಲ್ಲಂಘಿಸುವವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆ-2005 ರ ಅಡಿ ಹಾಗೂ ಕನಾಟಕ ಸಾಂಕ್ರಾಮಿಕ ಕಾಯ್ದೆ ಅನ್ವಯ ಕಾನೂನು ಕ್ರಮ ತೆಗೆದುಕೊಳ್ಳಲು ಸರ್ಕಾರದ ನಿಯಮಾವಳಿಗಳಲ್ಲಿ ಅವಕಾಶವಿರುತ್ತದೆ. ಹೀಗಾಗಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕೋವಿಡ್-19 ರೋಗವನ್ನು ನಿಯಂತ್ರಿಸಲು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

## ರೆಮ್ಡಿಸಿವಿಆರ್ ಕಳ್ಳತನ

ಭೂಪಾಲ್, ಏ. 17 – ಇಲ್ಲಿನ ಹಮಿದಿಯ ಸರ್ಕಾರಿ ಆಸ್ಪತ್ರೆಯಿಂದ ಕೊರೊನಾ ಚಿಕಿತ್ಸೆಗೆ ಬಳಸುವ ರೆಮ್ಡಿಸಿವಿಆರ್‌ನ 860 ಚುಚ್ಚುಮದ್ದುಗಳನ್ನು ಕದಿಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆಂತರಿಕವಾಗಿ ಈ ಕೃತ್ಯ ನಡೆದಿರುವ ಸಾಧ್ಯತೆ ತಳ್ಳಿ ಹಾಕಲಾಗದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ನಗರದ 40ನೇ ವಾರ್ಡ್‌ನಲ್ಲಿ ಇಂದು ಕೋವಿಡ್ ಲಸಿಕೆ ಕಾರ್ಯಕ್ರಮ



ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ 40ನೇ ವಾರ್ಡ್ (ಆಂಜನೇಯ ಬಡಾವಣೆ, ಸ್ವಾಮಿ ವಿವೇಕಾನಂದ ಬಡಾವಣೆ, ವಿನಾಯಕ ಬಡಾವಣೆ) ನಲ್ಲಿ ಕೋವಿಡ್-19 ಲಸಿಕಾ ಉತ್ಸವ ಕಾರ್ಯಕ್ರಮವನ್ನು ಮಹೇಶ್ ಪಿ.ಯು. ಕಾಲೇಜು ಆವರಣದಲ್ಲಿ ಬೆಳಿಗ್ಗೆ 9.30 ಕ್ಕೆ ಏರ್ಪಡಿಸಿದ್ದು, ಶಾಸಕ ಎಸ್.ಎ. ರವೀಂದ್ರನಾಥ್ ಚಾಲನೆ ನೀಡಲಿದ್ದಾರೆ. 45 ವರ್ಷ ಮೇಲ್ಪಟ್ಟವರು ಕೋವಿಡ್-19 ಲಸಿಕೆ ಪಡೆಯಲು ತಮ್ಮ ಆಧಾರ್ ಕಾರ್ಡ್ ಹಾಗೂ ಆಧಾರ್ ಕಾರ್ಡ್‌ನಲ್ಲಿ ನೋಂದಾಯಿಸಿರುವ ಮೊಬೈಲ್ ಸಂಖ್ಯೆಯ ಮೊಬೈಲನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಬೇಕು.

## ವಿಶೇಷ ಪರೀಕ್ಷೆಯಲ್ಲಿ ಒಲಿದ ರ‍್ಯಾಂಕ್



ದಾವಣಗೆರೆ, ಏ.17 - ಕಳೆದ ವರ್ಷ ಲಾಕ್‌ಡೌನ್ ಸಂದರ್ಭದಲ್ಲಿ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿನಿಯೊಬ್ಬರು ದಾವಣಗೆರೆ ವಿವಿ ನಡೆಸಿದ ವಿಶೇಷ ಪರೀಕ್ಷೆಯಲ್ಲಿ ಬಿ.ಕಾಂ.ನಲ್ಲಿ 2ನೇ ರ‍್ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ.

ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಕು. ಐಶ್ವರ್ಯ ಶಾನ್‌ಭಾಗ್, ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ತೆರಳಿದ್ದರು. ಅಷ್ಟು ಹೊತ್ತಿಗೆ ಲಾಕ್‌ಡೌನ್ ಆಗಿದ್ದರಿಂದ ಅಲ್ಲಿಯೇ ಉಳಿಯಬೇಕಾಯಿತು, ಅಲ್ಲಿಂದ ಬರಲು ಸಾರಿಗೆ ಸಮಸ್ಯೆಯಿತ್ತು. ಎಲ್ಲೆಡೆ ಕೋವಿಡ್ ಆತಂಕ ಇದ್ದುದರಿಂದ, ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ವಿವಿ ನಡೆಸಿದ ಪರೀಕ್ಷೆಗೆ ಹಾಜರಾಗಲು ಅವರಿಗೆ ಸಾಧ್ಯವಾಗಲಿಲ್ಲ. ಆದರೆ, ಡಿಸೆಂಬರ್-ಜನವರಿಯಲ್ಲಿ ವಿವಿಯು ವಿಶೇಷ ಪರೀಕ್ಷೆ ಆಯೋಜಿಸಿದ್ದು ಐಶ್ವರ್ಯಾಗೆ ಅನುಕೂಲವಾಯಿತು. ಆ ಪರೀಕ್ಷೆಯಲ್ಲಿ 2ನೇ ರ‍್ಯಾಂಕ್ ಪಡೆದು ಗಮನ ಸೆಳೆದಿದ್ದಾರೆ. ಐಶ್ವರ್ಯ, ನಗರದ ಶ್ರೀಮತಿ ಗೀತಾ ಮತ್ತು ವೆಂಕಟೇಶ್ ಶ್ಯಾನ್‌ಬೋಗ್ ಅವರ ಪುತ್ರಿ. ಐಶ್ವರ್ಯ ಅವರನ್ನು ಕಾಲೇಜಿನ ಆಡಳಿತ ಮಂಡಳಿ, ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

## ಟಿವಿ ಸ್ಟೇಷನ್ ಕೆರೆಗೆ ಮೇಯರ್ ವೀರೇಶ್ ಭೇಟಿ



ದಾವಣಗೆರೆ, ಏ.17 - ಪಾಲಿಕೆ ಮೇಯರ್ ಎಸ್.ಟಿ.ವೀರೇಶ್ ಅವರು ಟಿವಿ ಸ್ಟೇಷನ್ ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲಿನ ಅಭಿವೃದ್ಧಿ ಹಾಗೂ ಸಾರ್ವಜನಿಕರಿಗೆ ವಾಕಿಂಗ್ ಪಾತ್ ನಿರ್ಮಾಣದ ಬಗ್ಗೆ ಚರ್ಚಿಸಲಾಯಿತು. ಪಂಪ್ ಸ್ಟೇಷನ್ ಗಳಿಗೆ ಭೇಟಿ ನೀಡಿ ಅಲ್ಲಿನ ಕುಂದು ಕೊರತೆಗಳನ್ನು ಆಲಿಸಲಾಯಿತು. ಕಾರ್ಪೊರೇಟರ್ ರೇಣುಕಾ ಶ್ರೀನಿವಾಸ್, ಕೆ.ಎಂ. ವೀರೇಶ್, ಯಶೋಧಅ ಹೆಗ್ಗಪ್ಪ, ನಾಮ ನಿರ್ದೇಶಿತ ಸದಸ್ಯರು, ಬಸವರಾಜ್, ಇಇ ಹರ್ಷಿತ, ವಾಟರ್ ಸೆಕ್ಷನ್ ಇಂಜಿನಿಯರ್ ವಿನಾಯಕ್ ಜೋಷಿ ಹಾಗೂ ಸಿಬ್ಬಂದಿಯವರು ಇದ್ದರು.

## ವಾಟ್ಸ್‌ಅಪ್ ಮೂಲಕ ಮಾಹಿತಿ ಕದಿಯುವ ಎಚ್ಚರಿಕೆ

ನವದೆಹಲಿ, ಏ. 17 – ವಾಟ್ಸ್‌ಅಪ್‌ನಲ್ಲಿ ಕೆಲ ಲೋಪಗಳು ಕಂಡು ಬಂದಿದ್ದು, ಇವುಗಳನ್ನು ದುರ್ಬಳಕೆ ಮಾಡಿಕೊಂಡು ಸೂಕ್ಷ್ಮ ಮಾಹಿತಿ ಕದಿಯುವ ಸಾಧ್ಯತೆ ಇದೆ ಎಂದು ದೇಶದ ಸೈಬರ್ ಸುರಕ್ಷತಾ ಸಂಸ್ಥೆಯಾದ ಸಿಇಆರ್‌ಟಿ - ಐ.ಎನ್. ಎಚ್ಚರಿಕೆ ನೀಡಿದೆ. ವಾಟ್ಸ್‌ಆಪ್ ಮತ್ತು ವಾಟ್ಸ್ ಆಫ್ ಬ್ಯುಸಿನೆಸ್‌ಗಳ ಅಂಡ್ರಾಯ್ಡ್‌ನ ವಿ2.21.4.18, ಐ.ಒ.ಎಸ್.ಗಳ ವಿ2.21.32ಗಳಿಗೂ ಹಿಂದಿನ ಆವೃತ್ತಿಗಳಲ್ಲಿ ಈ ಲೋಪ ಇದೆ ಎಂದು ತಿಳಿಸಲಾಗಿದೆ.

## ಕಾಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ಸಿ. ಗುರುಸಿದ್ದಪ್ಪ



ದಾವಣಗೆರೆ, ಏ. 17 - ತಾಲ್ಲೂಕಿನ ಕಾಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತಕ್ಕೆ ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೆ.ಸಿ. ಗುರುಸಿದ್ದಪ್ಪ ಆಯ್ಕೆಯಾಗಿದ್ದಾರೆ.

ಭಾಗ್ಯಶ್ರೀ ಎಸ್. ಪಾಟೀಲ್ ಚುನಾವಣಾಧಿಕಾರಿಯಾಗಿದ್ದರು. ಸಂಘದ ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ಜಿ. ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


ಅಪೂರ್ವ ರೆಸಾರ್ಟ್ಸ್
ಎನ್.ಹೆಚ್.-4 ಬೈಪಾಸ್, ಬಾಡಾ ಕ್ರಾಸ್ ಹತ್ತಿರ, ದಾವಣಗೆರೆ.
ಸುಂದರ ಪ್ರಕೃತಿಯ ಮಧ್ಯೆ ನಿರ್ಮಿಸಿರುವ 'ಅಪೂರ್ವ ರೆಸಾರ್ಟ್ಸ್' ನಲ್ಲಿ ಸುಸಜ್ಜಿತವಾದ ಹವಾ ನಿಯಂತ್ರಿತ
ಅಪೂರ್ವ ಕನ್ವೆನ್ಷನ್ ಹಾಲ್
ಮದುವೆ ಹಾಗೂ ಶುಭ ಸಮಾರಂಭಗಳಿಗೆ ಲಭ್ಯವಿದೆ.
ವಾಹನ ನಿಲುಗಡೆಗೆ ವಿಶಾಲವಾದ ಸ್ಥಳಾವಕಾಶವಿದೆ. ಸಂಪರ್ಕಿಸಿ
(ಕೋವಿಡ್-19 ಮಾರ್ಗಸೂಚಿ ಅನ್ವಯ)
ಮೊ. : 80887 19562, 81056 88333


## ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ದಾವಣಗೆರೆ ಏ.17 - ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎ.ಬಸವರಾಜ್ ಅವರು ಏ.21 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಸಚಿವರು ಅಂದು ಬೆಳಿಗ್ಗೆ ಬೆಂಗಳೂರಿನಿಂದ ಹೊರಟು 9.30ಕ್ಕೆ ದಾವಣಗೆರೆ ಪ್ರವಾಸಿ ಮಂದಿರ (ಸರ್ಕ್ಯೂಟ್ ಹೌಸ್)ಕ್ಕೆ ಆಗಮಿಸುವರು. ನಂತರ ಬೆ. 10 ಗಂಟೆಗೆ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಕೋವಿಡ್-19 ನಿಯಂತ್ರಣದ ಕುರಿತು ಕೈಗೊಳ್ಳಲಾಗಿರುವ ಹಾಗೂ ಕೈಗೊಳ್ಳಬೇಕಾಗಿರುವ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಮತ್ತು ಜಿಲ್ಲೆಯ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚೆ ನಡೆಸುವರು. ಸಚಿವರು ಅದೇ ದಿನ ಮಧ್ಯಾಹ್ನ 2.30ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.


ಬಾಪೂಜಿ ವಿದ್ಯಾ ಸಂಸ್ಥೆ (ರಿ.)
ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ - 577004
ಪ್ರಕಟಣೆ ಮೊ.ನಂ. : 9844514595
ಈ ಮೂಲಕ ತಿಳಿಯಪಡಿಸುವುದೇನೆಂದರೆ ಶಾಮನೂರು ರಸ್ತೆಯಲ್ಲಿರುವ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ, ಇಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸುವ ಬಗ್ಗೆ ಗುತ್ತಿಗೆ ಕೊಡಲಾಗುವುದು. ಆಸಕ್ತಿಯುಳ್ಳವರು ದಿ : 19.04.2021 ರಿಂದ 24.04.2021 ರೊಳಗಾಗಿ ಕಾಲೇಜಿನ ಕಛೇರಿಗೆ ಭೇಟಿ ಕೊಟ್ಟು ಹೆಚ್ಚಿನ ಮಾಹಿತಿಯನ್ನು ಪಡೆಯತಕ್ಕದ್ದು.
ನಿರ್ದೇಶಕರು ಪ್ರಾಂಶುಪಾಲರು


## ರೆಮ್ಡಿಸಿವಿಆರ್ ಔಷಧಿ ಬೆಲೆ ಇಳಿಕೆ

ನವದೆಹಲಿ, ಏ. 17 – ರೆಮ್ಡಿಸಿವಿಆರ್ ಚುಚ್ಚುಮದ್ದಿನ ಬೆಲೆಯ ಬಗ್ಗೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿದ ನಂತರ, ಕಂಪನಿಗಳು ಸ್ವಯಂ ಪ್ರೇರಿತವಾಗಿ ಬೆಲೆ ಕಡಿತ ಮಾಡಿವೆ ಎಂದು ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ (ಎನ್.ಪಿ.ಪಿ.ಎ.) ತಿಳಿಸಿದೆ.

ಕ್ಯಾಡಿಲಾ ಹೆಲ್ತ್‌ಕೇರ್, ಡಾ. ರೆಡ್ಡೀಸ್ ಲ್ಯಾಬೋರೇಟರಿ, ಸಿಪ್ಲಾ ಮತ್ತಿತರೆ ಕಂಪನಿಗಳು ತಮ್ಮ ಬ್ರಾಂಡ್‌ಗಳ ರೆಮ್ಡಿಸಿವಿಆರ್ ಬೆಲೆಯನ್ನು ಕಡಿತಗೊಳಿಸಿವೆ. ಈ ಬಗ್ಗೆ ಟ್ವೀಟ್ ಮಾಡಿರುವ ರಾಸಾಯನಿಕ ಹಾಗೂ ರಸಗೊಬ್ಬರ ಖಾತೆ ಅಧೀನ ಸಚಿವ ಮನ್‌ಸುಖ್ ಎಲ್. ಮಾಂಡವಿಯ, ಸರ್ಕಾರದ ಮಧ್ಯ ಪ್ರವೇಶದ ನಂತರ ಬೆಲೆ ಇಳಿಕೆ ಮಾಡಲಾಗಿದೆ.

ಕ್ಯಾಡಿಲಾ ಹೆಲ್ತ್‌ಕೇರ್ ತನ್ನ ರೆಮ್‌ಡ್ಯಾಕ್ ಔಷಧಿಯ ಬೆಲೆ 100 ಎಂ.ಜಿ.ಗೆ 2,800 ರೂ. ಇದ್ದುದನ್ನು 899 ರೂಗಳಿಗೆ ಇಳಿಸಿದೆ. ಸಿಂಜೀನ್ ಇಂಟರ್‌ನ್ಯಾಷನಲ್ ತನ್ನ ಬ್ರಾಂಡ್ ಆದ ರೆಮ್‌ವಿನ್ ಬೆಲೆಯನ್ನು 3,950 ರೂ.ಗಳಿಂದ 2,450 ರೂ.ಗಳಿಗೆ ಇಳಿಸಿದೆ. ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬೊರೇಟರಿ ತನ್ನ ರೆಡ್ಯೆಕ್ಸ್ ಬೆಲೆಯನ್ನು 5,400 ರೂ.ಗಳಿಂದ 2,700 ರೂ.ಗಳಿಗೆ ಇಳಿಸಿದೆ. ಸಿಪ್ಲಾ ತನ್ನ ಸಿಪ್ರೇಮಿ ಬ್ರಾಂಡ್ ಔಷಧಿ ಬೆಲೆಯನ್ನು 4,000 ರೂ.ಗಳಿಂದ 3,000 ರೂ.ಗಳಿಗೆ ಇಳಿಸಿದೆ.

## ಎನ್.ಜಿ.ಪಿ.ಗೆ ಲಸಿಕೆ



ದಾವಣಗೆರೆ, ಏ.17 - ಬಿಜೆಪಿ ಮುಖಂಡ ಎನ್.ಜಿ. ಪುಟ್ಟಸ್ವಾಮಿ ಅವರು ಶನಿವಾರ ಕೋವಿಡ್ ಲಸಿಕೆ ಪಡೆದರು.

**ರಂಜಾನ್ ರೋಜಾ ಸಮಯ**


ದಿನಾಂಕ : 18.04.2021
ಇಫ್ತೇಯಾರಿ ಸಮಯ : 6-47

ದಿನಾಂಕ 18.04.2021
ಸಹೇರಿ ಸಮಯ : 4-56





ರಿನ್ಯೂ ಹೆಲ್ತ್ ಕೇರ್
ಪ್ರಸೂತಿ ಮತ್ತು ಸ್ತ್ರೀರೋಗ ಕ್ಲಿನಿಕ್
ಡಾ|| ಸುಷ್ಮ ಬಿ. ನಾಡಗೌಡ
ಎಂಬಿಬಿಎಸ್., ಎಂ.ಎಸ್., (ಓ.ಬಿ.ಜಿ)
ಪ್ರಸೂತಿ ಮತ್ತು ಸ್ತ್ರೀ-ರೋಗ ತಜ್ಞರು
ನಿಕಟಪೂರ್ವ ಸಲಹಾ ವೈದ್ಯರು ನವಚೇತನ ಆಸ್ಪತ್ರೆ ಬೆಂಗಳೂರು
ಭೇಟಿಯ ಸಮಯ :
ಬೆ: 11.00 ರಿಂದ 2.00 ಗಂಟೆ ಹಾಗೂ ಸಾ: 6.00 ರಿಂದ 8.30 ಗಂಟೆ
ಭಾನುವಾರ ರಜೆ
ಸಲಹೆ ಹಾಗೂ ಚಿಕಿತ್ಸೆಗಳು
• ಪ್ರಸವಪೂರ್ವ ಆರೈಕೆ • ಬಂಜೆತನ ನಿವಾರಣೆ • ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆ
• ಜನನ ನಿಯಂತ್ರಣ • ಅಲ್ಟ್ರಾಸೌಂಡ್ ಸ್ಕ್ಯಾನ್ • ಋತುಬಂಧ ಸಮಸ್ಯೆ
• ಮುಟ್ಟಿನ ಸಮಸ್ಯೆಗಳು • ಅನಿಯಂತ್ರಿತ ಮೂತ್ರ • ಪಿಸಿಓಡಿ



#681, 8ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ ತರಕಾರಿ ಮಳಿಗೆ ಹತ್ತಿರ, ಪಿ.ಜೆ.ಬಡಾವಣೆ, ದಾವಣಗೆರೆ– 577 002.
ಕರೆಮಾಡಿ : 9632374088

ಹೃತ್ಪೂರ್ವಕ ಕೃತಜ್ಞತೆಗಳು



ನನ್ನನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ಇದರ ಆಡಳಿತ ಮಂಡಳಿ ಸದಸ್ಯರನ್ನಾಗಿ
ನಾಮ ನಿರ್ದೇಶನ ಮಾಡಲು ಸಹಕರಿಸಿದ
ಡಾ|| ಜಿ.ಎಂ. ಸಿದ್ದೇಶ್ವರ, ಕೇಂದ್ರದ ಮಾಜಿ ಸಚಿವರು, ಹಾಲಿ ಸಂಸದರು, ದಾವಣಗೆರೆ.
ಶ್ರೀ ಬಿ.ಸಿ. ಪಾಟೀಲ್, ಕೃಷಿ ಸಚಿವರು, ಕರ್ನಾಟಕ ರಾಜ್ಯ ಸರ್ಕಾರ.
ಶ್ರೀ ಎಸ್.ಎ. ರವೀಂದ್ರನಾಥ್, ಮಾಜಿ ಸಚಿವರು, ಹಾಲಿ ಶಾಸಕರು, ಉತ್ತರ ವಿಧಾನ ಸಭಾ ಕ್ಷೇತ್ರ, ದಾವಣಗೆರೆ.
ಶ್ರೀ ಭೈರತಿ ಬಸವರಾಜ, ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ.
ಶ್ರೀ ಎಂ.ಪಿ. ರೇಣುಕಾಚಾರ್ಯ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಹಾಗೂ ಶಾಸಕರು, ಹೊನ್ನಾಳಿ ಕ್ಷೇತ್ರ
ದಾವಣಗೆರೆ ಜಿಲ್ಲೆಯ ಹಾಲಿ ಶಾಸಕರು ಹಾಗೂ ಮಾಜಿ ಶಾಸಕರಿಗೂ, ಬಿಜೆಪಿ ಮುಖಂಡರುಗಳಿಗೂ, ಬಿಜೆಪಿ ಕಾರ್ಯಕರ್ತರುಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳು.
ಕೆ.ನಾಗರಾಜಪ್ಪ ಕತ್ತಲಗೆರೆ
ಆಡಳಿತ ಮಂಡಳಿ ಸದಸ್ಯರು
ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte